SINCE 1962

DAVANAGERE
URBAN CO-OPERATIVE BANK LTD.

# 55ನೇ ವಾರ್ಷಿಕ ವರದಿ 2015-16

## ದಿ ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಲಿ.,

ಪ್ರಧಾನ ಕಛೇರಿ : ಪೋಸ್ಟ್ ಬಾಕ್ಸ್ ನಂ. 217, ಪಿ.ಬಿ. ರಸ್ತೆ, ದಾವಣಗೆರೆ – 577 002

# ಕಾರ್ಯನಿರ್ವಾಹಕ ಮಂಡಲಿ ಸದಸ್ಯರು



ಬಿ.ಸಿ. ಉಮಾಪತಿ
ಅಧ್ಯಕ್ಷರು



ಕೋಗುಂಡಿ ಬಕ್ಕೇಶಪ್ಪ
ಉಪಾಧ್ಯಕ್ಷರು



ಮತ್ತಿಹಳ್ಳಿ ವೀರಣ್ಣ
ನಿರ್ದೇಶಕರು



ಶ್ರೀಮತಿ ಐ.ವಸಂತಕುಮಾರಿ
ವಕೀಲರು
ನಿರ್ದೇಶಕರು



ಪಲ್ಲಾಗಟ್ಟೆ ಶಿವಾನಂದಪ್ಪ
ನಿರ್ದೇಶಕರು



ಅಂದನೂರು ಮುಪ್ಪಣ್ಣ
ನಿರ್ದೇಶಕರು



ಎಂ. ಚಂದ್ರಶೇಖರ್
ನಿರ್ದೇಶಕರು



ಟಿ.ಎಸ್. ಜಯರುದ್ರೇಶ್
ನಿರ್ದೇಶಕರು



ದೇವರಮನಿ ಶಿವಕುಮಾರ್
ನಿರ್ದೇಶಕರು



ಅಜ್ಜಂಪುರ ಶೆಟ್ರು ವಿಜಯಕುಮಾರ್
ನಿರ್ದೇಶಕರು



ಹೆಚ್.ಎಂ. ರುದ್ರಮುನಿಸ್ವಾಮಿ
ನಿರ್ದೇಶಕರು



ಎಸ್. ರಾಜಕುಮಾರ್
ನಿರ್ದೇಶಕರು



ಶ್ರೀಮತಿ ಸುರೇಖ ಎಂ. ಚಿಗಟೇರಿ
ನಿರ್ದೇಶಕರು



ಮುಂಡಾಸ ವೀರೇಂದ್ರ
ಚಾರ್ಟರ್ಡ್ ಅಕೌಂಟೆಂಟ್
ವೃತ್ತಿಪರ ನಿರ್ದೇಶಕರು



ವಿ. ಲಿಂಗರಾಜು
ಚಾರ್ಟರ್ಡ್ ಅಕೌಂಟೆಂಟ್
ವೃತ್ತಿಪರ ನಿರ್ದೇಶಕರು



ಡಾ|| ಎ.ಕೆ. ರುದ್ರಮುನಿ
ಕಾರ್ಯನಿರ್ವಹಣಾ ನಿರ್ದೇಶಕರು



ಕಂಚಿಕೇರಿ ಮಹೇಶ್
ಕಾರ್ಯನಿರ್ವಹಣಾ ನಿರ್ದೇಶಕರು

# ದಿ ದಾವಣಗೆರೆ ಅರ್ಬನ್ ಕೋ-ಆಪ್. ಬ್ಯಾಂಕ್ ಲಿ., ದಾವಣಗೆರೆ



**ಬಿ.ಸಿ. ಉಮಾಪತಿ**
ಅಧ್ಯಕ್ಷರು



**ಕೋಗುಂಡಿ ಬಕ್ಕೇಶಪ್ಪ**
ಉಪಾಧ್ಯಕ್ಷರು

**ಸನ್ಮಾನ್ಯ ಸಹಕಾರಿ ಬಂಧುಗಳೇ,**

ನಮ್ಮ ಬ್ಯಾಂಕಿನ 55ನೇ ವಾರ್ಷಿಕ ಮಹಾಸಭೆಗೆ ತಮ್ಮೆಲ್ಲರನ್ನು ಬ್ಯಾಂಕಿನ ಕಾರ್ಯ ನಿರ್ವಾಹಕ ಮಂಡಲಿಯ ಪರವಾಗಿ ಸ್ವಾಗತಿಸಲು ಹರ್ಷಿಸುತ್ತೇವೆ.

2015–16ನೇ ಸಾಲಿನ ವಾರ್ಷಿಕ ವರದಿ, ಲಾಭ–ನಷ್ಟ ಮತ್ತು ಅಢಾವೆ ಪತ್ರಿಕೆಗಳನ್ನು ತಮ್ಮ ಪರಿಶೀಲನೆಗಾಗಿ ಕಳುಹಿಸಲಾಗಿದೆ. ಬ್ಯಾಂಕಿನ ಆರ್ಥಿಕ ಪ್ರಗತಿಯು ವರ್ಷದಿಂದ ವರ್ಷಕ್ಕೆ ಅಭಿವೃದ್ಧಿ ಹೊಂದಿದೆ ಎಂದು ತಿಳಿಸಲು ಸಂತೋಷವಾಗುತ್ತದೆ. ಬ್ಯಾಂಕಿನ ಲಾಭವು ರೂ.5.15 ಕೋಟಿ ಗಳಿಸಿದ್ದು ಠೇವಣಿಗಳು ರೂ.230 ಕೋಟಿಗೂ ಮೀರಿದ್ದು ಹಿಂದಿನ ವರ್ಷಕ್ಕಿಂತ ರೂ.24 ಕೋಟಿಯಷ್ಟು ಹೆಚ್ಚಾಗಿದೆ. ಸಾಲ ಮತ್ತು ಮುಂಗಡಗಳು ರೂ.138 ಕೋಟಿಯಷ್ಟಿದ್ದು, ಬ್ಯಾಂಕಿನ ದುಡಿಯುವ ಬಂಡವಾಳವು ರೂ.283 ಕೋಟಿಗೂ ಮೀರಿ ಹಿಂದಿನ ವರ್ಷಕ್ಕಿಂತ ರೂ.27 ಕೋಟಿಯಷ್ಟು ವೃದ್ಧಿಯಾಗಿ ಬ್ಯಾಂಕು ಪ್ರಗತಿ ಪಥದಲ್ಲಿದೆ ಎಂದು ತಿಳಿಸಲು ಹರ್ಷಿಸುತ್ತೇವೆ. ನಮ್ಮ ಬ್ಯಾಂಕಿನ ಈ ಅಭಿವೃದ್ಧಿಗೆ ಬಹುಮುಖ್ಯವಾಗಿ ಬ್ಯಾಂಕಿನ ಗ್ರಾಹಕರು, ಸದಸ್ಯರು, ಅರ್ಪಣಾ ಮನೋಭಾವನೆಯ ಆಡಳಿತ ಮಂಡಲಿ ಮತ್ತು ಸಿಬ್ಬಂದಿ ವರ್ಗ ಕಾರಣ ಎಂಬುದು ಹೆಮ್ಮೆಯ ವಿಷಯ. ಈ ವರ್ಷವೂ ಸಹ ಲೆಕ್ಕಪರಿಶೋಧನಾ ವರದಿಯಲ್ಲಿ ನಮ್ಮ ಬ್ಯಾಂಕು 'ಎ' ಆಡಿಟ್ ವರ್ಗದಲ್ಲಿ ಮುಂದುವರೆದಿರುವುದು ಸಂತಸದ ಸಂಗತಿ.

ಪ್ರಸಕ್ತ ಹಣಕಾಸು ವರ್ಷದಲ್ಲಿ ಯೋಜನಾಬದ್ಧ ಕಾರ್ಯಕ್ರಮಗಳನ್ನು ರೂಪಿಸಿಕೊಂಡು, ಸತತ ಪ್ರಯತ್ನದಿಂದ ಅನುತ್ಪಾದಕ ಸಾಲಗಳ ವಸೂಲಾತಿ ಕಾರ್ಯವನ್ನು ನಿರಂತರವಾಗಿ ನಡೆಸಿದ್ದರಿಂದ ಅನುತ್ಪಾದಕ ಸಾಲಗಳ ಪ್ರಮಾಣವನ್ನು ಗಣನೀಯವಾಗಿ ಇಳಿಸಲು ಸಾಧ್ಯವಾಗಿದ್ದು ಬ್ಯಾಂಕಿನ ಪ್ರಗತಿಗೆ ಕಾರಣವಾಗಿದೆ.

ಬ್ಯಾಂಕಿನ ಕಾರ್ಯಕ್ಷೇತ್ರದ ವ್ಯಾಪ್ತಿಯನ್ನು ವಿಸ್ತರಿಸಿ, ಅಲ್ಲಿ ಶಾಖೆಗಳನ್ನು ತೆರೆಯುವುದಾಗಿ ತಿಳಿಸಲು ಕಾರ್ಯನಿರ್ವಾಹಕ ಮಂಡಲಿಯು ಹರ್ಷಿಸುತ್ತದೆ.

ನಮ್ಮ ಬ್ಯಾಂಕಿನ ಗ್ರಾಹಕರಿಗೆ ಎಟಿಎಂ ಸೌಲಭ್ಯ ಒದಗಿಸಲು ಕಾರ್ಡ್‌ಗಳು ತಯಾರಾಗಿದ್ದು ಪರೀಕ್ಷಿಸುವ ಹಂತದಲ್ಲಿರುತ್ತದೆ. ಇನ್ನು ಕೆಲವೇ ದಿನಗಳಲ್ಲಿ ಉಳಿತಾಯ ಖಾತೆಯುಳ್ಳ ಗ್ರಾಹಕರಿಗೆ ವಿತರಿಸಲಾಗುವುದು. ನಮ್ಮ ಬ್ಯಾಂಕಿನ ಎಟಿಎಂ ಕಾರ್ಡ್‌ಗಳನ್ನು ದೇಶದೆಲ್ಲೆಡೆ ಇರುವ ಯಾವುದೇ ಎಟಿಎಂಗಳಲ್ಲಿ ಬಳಸಿ ಹಣ ಪಡೆಯಬಹುದು ಮತ್ತು ರೂಪೇ ಸೌಲಭ್ಯವಿರುವ ಎಲ್ಲಾ ವಾಣಿಜ್ಯ ಕೇಂದ್ರಗಳಲ್ಲಿ ವಹಿವಾಟುಗಳನ್ನು ಸಹ ಮಾಡಬಹುದು.

ನಮ್ಮ ಬ್ಯಾಂಕಿನ ಮೇಲೆ ಅಭಿಮಾನ ಮತ್ತು ವಿಶ್ವಾಸವಿಟ್ಟು ವ್ಯವಹರಿಸಿ ಬ್ಯಾಂಕಿನ ಪ್ರಗತಿಗೆ ಕಾರಣೀಭೂತರಾದ ಎಲ್ಲಾ ಸದಸ್ಯರಿಗೂ, ಗ್ರಾಹಕರಿಗೂ, ಸಂಘ–ಸಂಸ್ಥೆಗಳಿಗೂ ಹೃತ್ಪೂರ್ವಕ ಧನ್ಯವಾದಗಳನ್ನು ಅರ್ಪಿಸುತ್ತೇವೆ. ನಮ್ಮ ಬ್ಯಾಂಕಿನ ಸರ್ವತೋಮುಖ ಅಭಿವೃದ್ಧಿಗೆ ನಿಮ್ಮ ಸಹಕಾರವು ಸದಾಕಾಲ ಇರಲೆಂದು ವಿನಂತಿಸುತ್ತೇವೆ.

**ಕಾರ್ಯನಿರ್ವಾಹಕ ಮಂಡಲಿಯ ಪರವಾಗಿ**

K. Bakkeshappa
**(ಕೋಗುಂಡಿಬಕ್ಕೇಶಪ್ಪ)**
ಉಪಾಧ್ಯಕ್ಷರು

B.C. Umapathy
**(ಬಿ.ಸಿ. ಉಮಾಪತಿ)**
ಅಧ್ಯಕ್ಷರು

# ದಿ ದಾವಣಗೆರೆ ಅರ್ಬನ್ ಕೋ-ಆಪ್. ಬ್ಯಾಂಕ್ ಲಿ., ದಾವಣಗೆರೆ

## 55ನೇ ವಾರ್ಷಿಕ ಮಹಾಸಭೆಯ ನೋಟೀಸು

ಬ್ಯಾಂಕಿನ 2015-16ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು ದಿನಾಂಕ:18-9-2016 ನೇ ಭಾನುವಾರ ಬೆಳಿಗ್ಗೆ 11-00 ಘಂಟೆಗೆ ನಗರದ **ನಿಜಲಿಂಗಪ್ಪ ಬಡಾವಣೆಯಲ್ಲಿರುವ ಶ್ರೀ ಗುರು ಶಿವಯೋಗಿ ಬಕ್ಕೇಶ್ವರ ಮಹಾಸ್ವಾಮಿ ಕಲ್ಯಾಣ ಮಂಟಪದಲ್ಲಿ** ಕರೆಯಲಾಗಿದೆ. ಮಾನ್ಯ ಸದಸ್ಯರು ಸಕಾಲಕ್ಕೆ ಆಗಮಿಸಿ ಸಭೆಯಲ್ಲಿ ಭಾಗವಹಿಸಲು ಕೋರಲಾಗಿದೆ.

### ಸಭೆಯ ಕಾರ್ಯಸೂಚಿ

**ಪ್ರಾರ್ಥನೆ.**

1. ದಿನಾಂಕ 20-09-2015 ರಂದು ನಡೆದ 54ನೇ ವಾರ್ಷಿಕ ಮಹಾಸಭೆಯ ನಿರ್ಣಯಗಳನ್ನು ಓದಿ ದೃಢೀಕರಿಸುವುದು.
2. ಕಾರ್ಯನಿರ್ವಾಹಕ ಮಂಡಲಿಯವರು ತಯಾರಿಸಿರುವ 55ನೇ ವಾರ್ಷಿಕ ವರದಿಯನ್ನು (2015-16) ಪರಿಶೀಲಿಸುವುದು.
3. ದಿನಾಂಕ 31-03-2016ಕ್ಕೆ ಅಂತ್ಯವಾಗುವ ವರ್ಷದ ಲಾಭ-ನಷ್ಟ ಮತ್ತು ಅಢಾವೆ ಪತ್ರಿಕೆ ಪರಿಶೀಲನೆ ಮತ್ತು 2015-16ನೇ ಸಾಲಿನ ಲೆಕ್ಕ ಪರಿಶೋಧಕರ ವರದಿಗೆ ಕಾರ್ಯನಿರ್ವಾಹಕ ಮಂಡಲಿಯು ತಯಾರಿಸಿದ ಅನುಪಾಲನಾ ವರದಿಯ ಪರಿಗಣನೆ.
4. 2015-2016ನೇ ಸಾಲಿನ ಆಯವ್ಯಯದ ಅಂದಾಜಿಗಿಂತ ಹೆಚ್ಚುವರಿ ಆದ ಖರ್ಚುಗಳನ್ನು ಒಪ್ಪುವುದು ಮತ್ತು 2016-17ನೇ ಸಾಲಿಗೆ ಆಯವ್ಯಯ ಮಂಜೂರು ಮಾಡುವುದು.
5. 2015-2016ನೇ ಸಾಲಿನ ಲಾಭ ವಿಲೇವಾರಿ ಮಾಡುವುದು.
6. ನಿರ್ದೇಶಕ ಮಂಡಲಿಯು 2016-17ನೇ ಸಾಲಿಗೆ ರೂಪಿಸಿದ ಕಾರ್ಯ ಚಟುವಟಿಕೆಗಳನ್ನು ಅನುಮೋದಿಸುವುದು.
7. ಬ್ಯಾಂಕಿನ ಉಪನಿಯಮಗಳ ತಿದ್ದುಪಡಿಯನ್ನು ಅನುಮೋದಿಸುವುದು.
8. 2016-17ನೇ ಸಾಲಿಗೆ ಬ್ಯಾಂಕಿನ ಶಾಸನ ಬದ್ಧ ಲೆಕ್ಕ ಪರಿಶೋಧಕರ ನೇಮಕಾತಿ ಅನುಮೋದನೆ.
9. 2016-17ನೇ ಸಾಲಿಗೆ ಬಾಹ್ಯ ಮೂಲಗಳಿಂದ ಪಡೆಯಬಹುದಾದ ಸಾಲಗಳ ಗರಿಷ್ಠ ಮಿತಿಯನ್ನು ನಿಗಧಿಪಡಿಸುವುದು.
10. ಅಧ್ಯಕ್ಷರ ಅಪ್ಪಣೆ ಮೇರೆಗೆ ಬರಬಹುದಾದ ಇತರೆ ವಿಷಯಗಳು.

ಕಾರ್ಯನಿರ್ವಾಹಕ ಮಂಡಲಿ ಪರವಾಗಿ

**(ಉಮೇಶ್ ಎಸ್. ರೋಣದ್)**
ಪ್ರಧಾನ ವ್ಯವಸ್ಥಾಪಕರು

ದಿನಾಂಕ: 25-08-2016

**ಸೂಚನೆ:** ಲೆಕ್ಕ ಪರಿಶೋಧಕರ ವರದಿ ಹಾಗೂ ಕಾರ್ಯನಿರ್ವಾಹಕ ಮಂಡಲಿ ತಯಾರಿಸಿದ ಅನುಪಾಲನ ವರದಿಯ ಪ್ರತಿಗಳನ್ನು ಪಡೆಯ ಬಯಸುವ ಸುಸ್ತಿದಾರರಲ್ಲದ ಸದಸ್ಯರು ಪ್ರಧಾನ ವ್ಯವಸ್ಥಾಪಕರಿಂದ ಪಡೆಯಬಹುದು ಹಾಗೂ ಸಭೆಯಲ್ಲಿ ಇತರೆ ವಿಷಯಗಳನ್ನು ಸೂಚಿಸುವವರು ವಾರ್ಷಿಕ ಸಭೆಯ ತಾರೀಖಿಗೆ 3 ದಿವಸಗಳ ಮುಂಚಿತವಾಗಿ ಪ್ರಧಾನ ವ್ಯವಸ್ಥಾಪಕರಿಗೆ ಲಿಖಿತ ಮೂಲಕ ತಿಳಿಸಿದಲ್ಲಿ ಅಧ್ಯಕ್ಷರ ಅನುಮತಿ ಪಡೆದು ಚರ್ಚಿಸಲು ಅವಕಾಶವಿರುತ್ತದೆ. ನಂತರ ಬಂದ ವಿಷಯವನ್ನು ಸಭೆಯಲ್ಲಿ ಚರ್ಚಿಸಲು ಅವಕಾಶವಿರುವುದಿಲ್ಲ.

# ದಿ ದಾವಣಗೆರೆ ಅರ್ಬನ್ ಕೋ-ಆಪ್. ಬ್ಯಾಂಕ್ ಲಿ., ದಾವಣಗೆರೆ

## 2015-16ನೇ ಸಾಲಿನ ವಾರ್ಷಿಕ ವರದಿ

**ಸನ್ಮಾನ್ಯ ಸಹಕಾರಿ ಬಂಧುಗಳೇ,**

ನಮ್ಮ ಬ್ಯಾಂಕಿನ 55ನೇ ವರ್ಷದ ಈ ವಾರ್ಷಿಕ ಮಹಾಸಭೆಗೆ ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾ, 2015-16 ನೇ ಸಾಲಿನ ವಾರ್ಷಿಕ ವರದಿಯನ್ನು ತಮ್ಮ ಮುಂದೆ ಮಂಡಿಸಲು ಹರ್ಷಿಸುತ್ತೇವೆ. ನಮ್ಮ ಬ್ಯಾಂಕು ಈ ವರ್ಷವೂ ಠೇವಣಿ ಸಂಗ್ರಹಣೆ, ದುಡಿಯುವ ಬಂಡವಾಳ, ಕಾಯ್ದಿಟ್ಟ ನಿಧಿ ಹಾಗೂ ಇತರೆ ನಿಧಿಗಳಲ್ಲಿ ಉತ್ತಮ ಪ್ರಗತಿ ಸಾಧಿಸಿದೆ ಎಂದು ತಿಳಿಸಲು ಸಂತೋಷ ಪಡುತ್ತೇವೆ.

**ಆರ್ಥಿಕ ಪ್ರಗತಿ :** (ರೂ. ಕೋಟಿಗಳಲ್ಲಿ)

| ವಿವರಗಳು | 31-03-2016 ರೂ. | 31-03-2015 ರೂ. | ಹೆಚ್ಚುವರಿಯಾದದ್ದು ರೂ. | ಶೇಕಡಾವಾರು ಪ್ರಮಾಣ % |
|---|---|---|---|---|
| ದುಡಿಯುವ ಬಂಡವಾಳ | 282.59 | 255.96 | 26.63 | 10.40 % |
| ಕಾಯ್ದಿಟ್ಟ ನಿಧಿ ಹಾಗೂ ಇತರೆ ನಿಧಿಗಳು | 37.34 | 34.50 | 2.84 | 8.23 % |
| ಠೇವಣಿಗಳು | 230.64 | 206.19 | 24.45 | 11.86 % |
| ಸಾಲಗಳು | 138.46 | 139.64 | -1.18 | -0.85 % |
| ಲಾಭ (ತೆರಿಗೆ ಹಾಗೂ ಇತರೆ ಅವಕಾಶ ಕಲ್ಪಿಸುವ ಮೊದಲು) | 5.15 | 8.35 | -3.20 | -38.32 % |

1. **ದುಡಿಯುವ ಬಂಡವಾಳ:**

   ಹಣಕಾಸು ವರ್ಷದ ಪ್ರಾರಂಭದಲ್ಲಿ ದುಡಿಯುವ ಬಂಡವಾಳ ರೂ.255.96 ಕೋಟಿ ಇದ್ದದ್ದು, ವರ್ಷಾಂತ್ಯಕ್ಕೆ ರೂ.282.59 ಕೋಟಿ ಆಗಿ ರೂ.26.63 ಕೋಟಿ ಹೆಚ್ಚಿಗೆಯಾಗಿರುತ್ತದೆ.

2. **ಕಾಯ್ದಿಟ್ಟ ನಿಧಿ ಹಾಗೂ ಇತರೆ ನಿಧಿಗಳು :**

   ವರ್ಷದ ಪ್ರಾರಂಭದಲ್ಲಿ ನಿಧಿಗಳ ಮೊತ್ತವು ರೂ.34.50 ಕೋಟಿ ಇದ್ದದ್ದು, ವರ್ಷಾಂತ್ಯಕ್ಕೆ ರೂ.37.34 ಕೋಟಿ ಆಗಿ, ವರದಿ ಸಾಲಿನಲ್ಲಿ ರೂ.2.84 ಕೋಟಿ ಹೆಚ್ಚಿಗೆಯಾಗಿರುತ್ತದೆ. ಇದರಿಂದಾಗಿ ಬ್ಯಾಂಕು ತನ್ನ ಸ್ವಂತ ನಿಧಿಗಳನ್ನು ಹೆಚ್ಚಿಸಿಕೊಂಡಿದೆ ಎಂದು ತಿಳಿಸಲು ಹರ್ಷಿಸುತ್ತೇವೆ.

3. **ಠೇವಣಿಗಳು:**

   ಬ್ಯಾಂಕಿನ ಮೇಲೆ ಸಾರ್ವಜನಿಕರು ಮತ್ತು ಸದಸ್ಯರು ಇರಿಸಿದ ಅಪಾರ ವಿಶ್ವಾಸ ಹಾಗೂ ಬ್ಯಾಂಕು ತನ್ನ ಗ್ರಾಹಕರಿಗೆ ನೀಡುತ್ತಿರುವ ಸೇವೆಗಳಿಂದಾಗಿ, ಕಳೆದ ವರ್ಷದ ಪ್ರಾರಂಭದಲ್ಲಿದ್ದ ರೂ.206.19 ಕೋಟಿ ಠೇವಣಿಗಳು, ವರ್ಷಾಂತ್ಯಕ್ಕೆ ರೂ.230.64 ಕೋಟಿ ಇದ್ದು, ರೂ. 24.45ಕೋಟಿ ಹೆಚ್ಚಿಗೆಯಾಗಿರುತ್ತದೆ.

### ಶಾಖಾವಾರು ಠೇವಣಿಗಳ ವಿವರಗಳು

(ರೂ. ಕೋಟಿಗಳಲ್ಲಿ)

| ಶಾಖೆಗಳು | 31-03-2016 | 31-03-2015 | ಹೆಚ್ಚಿಗೆ |
|---|---|---|---|
| ಪ್ರಧಾನ ಕಛೇರಿ | 81.12 | 72.69 | 8.43 |
| ಚೌಕಿಪೇಟೆ | 45.78 | 39.19 | 6.59 |
| ನರಸರಾಜ ರಸ್ತೆ | 41.71 | 36.00 | 5.71 |
| ಪಿ.ಜೆ. ಬಡಾವಣೆ | 33.23 | 31.09 | 2.14 |
| ದೇ. ಅರಸ್ ಬಡಾವಣೆ | 22.60 | 21.50 | 1.10 |
| ಹೊನ್ನಾಳಿ | 6.20 | 5.72 | 0.48 |
| **ಒಟ್ಟು** | **230.64** | **206.19** | **24.45** |

4. **ಸಾಲ ಹಾಗೂ ಮುಂಗಡಗಳು:**

ಕಳೆದ ವರ್ಷದ ಕೊನೆಯಲ್ಲಿ ರೂ.139.64 ಕೋಟಿ ಇದ್ದ ಸಾಲಗಳು, ಈ ಸಾಲಿನ ಅಂತ್ಯಕ್ಕೆ ರೂ.138.46 ಕೋಟಿ ಆಗಿದ್ದು, ಹಿಂದಿನ ವರ್ಷಕ್ಕಿಂತ ರೂ. 1.18 ಕೋಟಿ ಕಡಿಮೆಯಾಗಿರುತ್ತದೆ.

**ಶಾಖಾವಾರು ಸಾಲಗಳ ವಿವರಗಳು** (ರೂ. ಕೋಟಿಗಳಲ್ಲಿ)

| ಶಾಖೆಗಳು | 31-03-2016 | 31-03-2015 | ಹೆಚ್ಚಿಗೆ/ಕಡಿಮೆ |
|---|---|---|---|
| ಪ್ರಧಾನ ಕಛೇರಿ | 57.80 | 60.63 | -2.83 |
| ಚೌಕಿಪೇಟೆ | 24.97 | 20.34 | 4.63 |
| ನರಸರಾಜ ರಸ್ತೆ | 23.38 | 18.84 | 4.54 |
| ಪಿ.ಜೆ. ಬಡಾವಣೆ | 11.31 | 17.31 | -6.00 |
| ದೇ. ಅರಸ್ ಬಡಾವಣೆ | 15.11 | 16.62 | -1.51 |
| ಹೊನ್ನಾಳಿ | 5.89 | 5.90 | -0.01 |
| **ಒಟ್ಟು** | **138.46** | **139.64** | **-1.18** |

5. **ಷೇರು ಬಂಡವಾಳ:**

ಹಣಕಾಸು ವರ್ಷದ ಪ್ರಾರಂಭದಲ್ಲಿ ಷೇರು ಬಂಡವಾಳ ರೂ.7.67 ಕೋಟಿ ಇದ್ದದ್ದು, ವರ್ಷಾಂತ್ಯಕ್ಕೆ ರೂ.8.20 ಕೋಟಿ ಆಗಿ ರೂ. 53 ಲಕ್ಷ ಹೆಚ್ಚಿಗೆಯಾಗಿರುತ್ತದೆ.

6. **ಸದಸ್ಯತ್ವ:**

ವರ್ಷದ ಪ್ರಾರಂಭದಲ್ಲಿದ್ದ ಬ್ಯಾಂಕಿನ ಸದಸ್ಯರ ಸಂಖ್ಯೆ 14931 ಪ್ರಸಕ್ತ ಸಾಲಿನಲ್ಲಿ ಹೊಸದಾಗಿ 321 ಜನ ಸದಸ್ಯತ್ವ ಪಡೆದಿದ್ದು, 182 ಜನ ಸದಸ್ಯತ್ವ ಹಿಂದಕ್ಕೆ ಪಡೆದಿದ್ದಾರೆ. ವರ್ಷದ ಕೊನೆಯಲ್ಲಿ ಇದ್ದ ಬ್ಯಾಂಕಿನ ಒಟ್ಟು ಸದಸ್ಯರ ಸಂಖ್ಯೆ 15070

7. **ಬ್ಯಾಂಕಿನ ತೊಡಗಣೆಗಳು:**

ರಿಸರ್ವ್ ಬ್ಯಾಂಕಿನ ಸುತ್ತೋಲೆ ಪ್ರಕಾರ ತೊಡಗಣೆಗಳನ್ನು ಸರ್ಕಾರದ ಭದ್ರತೆಗಳಲ್ಲಿ, ವಿವಿಧ ಬ್ಯಾಂಕುಗಳ ಖಾಯಂ ಠೇವಣಿಗಳಲ್ಲಿ ಹಾಗೂ ಇತರೆ ಹಣಕಾಸು ಸಂಸ್ಥೆಗಳಲ್ಲಿ ಲಾಭದಾಯಕವಾಗಿ ತೊಡಗಣೆ ಮಾಡಿದ್ದು, ಸಾಲಾಖೈರಿಗೆ ರೂ.125.30 ಕೋಟಿ ತೊಡಗಣೆಗಳಿರುತ್ತದೆ. ಇದು ಹಿಂದಿನ ಸಾಲಿಗಿಂತ ರೂ.25.30 ಕೋಟಿ ಹೆಚ್ಚಿಗೆಯಾಗಿರುತ್ತದೆ. ಹೂಡಿಕೆಗಳಿಂದ ಬ್ಯಾಂಕಿಗೆ ರೂ.9.39 ಕೋಟಿ ಆದಾಯ ಬಂದಿರುತ್ತದೆ.

8. **ಸಾಲ ವಸೂಲಾತಿ ಮತ್ತು ಅನುತ್ಪಾದನಾ ಆಸ್ತಿ ಪ್ರಮಾಣ:**

ಪ್ರಸಕ್ತ ಹಣಕಾಸು ವರ್ಷದಲ್ಲಿ ಯೋಜನಾಬದ್ಧ ಕಾರ್ಯಕ್ರಮಗಳನ್ನು ರೂಪಿಸಿಕೊಂಡು, ಸತತ ಪ್ರಯತ್ನದಿಂದ ಅನುತ್ಪಾದಕ ಸಾಲಗಳ ವಸೂಲಾತಿ ಕಾರ್ಯವನ್ನು ನಿರಂತರವಾಗಿ ನಡೆಸಿದ್ದರಿಂದ ಮತ್ತು ಅನುತ್ಪಾದಕ ಸಾಲಗಳಿಂದ ಉಂಟಾಗಬಹುದಾದ ಪರಿಣಾಮಗಳನ್ನು ಸಾಲಗಾರ ಸದಸ್ಯರಿಗೆ ಮನವರಿಕೆ ಮಾಡಿ, ಕಟ್ಟು ಬಾಕಿ ಸಾಲಗಾರರಿಂದ ಹೆಚ್ಚಿನ ಪ್ರಮಾಣದ ಸಾಲ ವಸೂಲಾತಿ ಮಾಡುವುದರ ಮೂಲಕ ಅನುತ್ಪಾದಕ ಸಾಲಗಳ ಪ್ರಮಾಣವನ್ನು ಗಣನೀಯವಾಗಿ ಇಳಿಸಲು ಸಾಧ್ಯವಾಗಿ ಬ್ಯಾಂಕಿನ ಪ್ರಶಂಸಾರ್ಹ ಪ್ರಗತಿಗೆ ಕಾರಣವಾಗಿದೆ. ಕಟ್ಟುಬಾಕಿ ಪ್ರಮಾಣ ಶೇಕಡ 2.74 ರಷ್ಟಿದ್ದು ಬ್ಯಾಂಕು ಸತತವಾಗಿ 0% ನಿವ್ವಳ ಎನ್.ಪಿ.ಎ. (ಅನುತ್ಪಾದಕ ಆಸ್ತಿ) ಹೊಂದಿರುವುದು ಹೆಮ್ಮೆಯ ವಿಷಯವಾಗಿದೆ.

9. **ಲಾಭ:** ವರದಿ ಸಾಲಿನಲ್ಲಿ ಬ್ಯಾಂಕು ರೂ.5,14,89,839-45 ಲಾಭ ಗಳಿಸಿದ್ದು, ಶಾಖಾವಾರು ಲಾಭಗಳ ವಿವರ ಈ ಕೆಳಕಂಡಂತಿದೆ.

## ಶಾಖಾವಾರು ಲಾಭಗಳ ವಿವರಗಳು

(ರೂ. ಕೋಟಿಗಳಲ್ಲಿ)

| ಶಾಖೆಗಳು | 31-03-2016 | 31-03-2015 | ಕಡಿಮೆ |
|---|---|---|---|
| ಪ್ರಧಾನ ಕಛೇರಿ | 1.97 | 3.86 | 1.89 |
| ಚೌಕಿಪೇಟೆ | 1.21 | 1.16 | +0.05 |
| ನರಸರಾಜ ರಸ್ತೆ | 0.88 | 1.08 | 0.20 |
| ಪಿ.ಜೆ. ಬಡಾವಣೆ | 0.27 | 0.67 | 0.40 |
| ದೇ. ಅರಸ್ ಬಡಾವಣೆ | 0.68 | 1.42 | 0.74 |
| ಹೊನ್ನಾಳಿ | 0.14 | 0.16 | 0.02 |
| **ಒಟ್ಟು** | **5.15** | **8.35** | **3.20** |

ವರದಿ ಸಾಲಿನಲ್ಲಿ ಬ್ಯಾಂಕು ರೂ.5,14,89,839-45 ಲಾಭ ಗಳಿಸಿದ್ದು, ಲಾಭ ನಷ್ಟ ಮತ್ತು ಆಢಾವೆ ಪತ್ರಿಕೆಯಲ್ಲಿ ತೋರಿಸಿರುವಂತೆ ಅವಕಾಶ ಕಲ್ಪಿಸಲಾಗಿದೆ.

**10. 2015-16ನೇ ಸಾಲಿನ ಲಾಭ ವಿಭಾಗಣೆ :** ಬ್ಯಾಂಕು ಆದಾಯ ತೆರಿಗೆ ಹಾಗೂ ಇತರೆ ಅವಕಾಶಗಳನ್ನು ಕಲ್ಪಿಸಿದ ನಂತರ ರೂ.2,50,73,476-45 ನಿವ್ವಳ ಲಾಭ ಗಳಿಸಿದೆ. ತಮ್ಮೆಲ್ಲರ ಒಪ್ಪಿಗೆ ಪಡೆದು ಲಾಭವನ್ನು ಈ ಕೆಳಕಾಣಿಸಿದಂತೆ ವಿಲೇವಾರಿ ಮಾಡಲು ಕಾರ್ಯಕಾರಿ ಮಂಡಲಿ ನಿರ್ಣಯಿಸಿದೆ.

| ಕ್ರ.ಸಂ | ನಿಧಿಗಳು | 31-03-2016ಕ್ಕೆ ಇದ್ದಂತೆ | ಲಾಭ ವಿಭಾಗಣೆ | ಲಾಭ ವಿಭಾಗಣೆ ನಂತರ ನಿಧಿಗಳು |
|---|---|---|---|---|
| 1 | ಮೀಸಲು ನಿಧಿ ಶೇ 30 ರಂತೆ | 12,71,75,184-38 | 75,23,476-45 | 13,46,98,660-83 |
| 2 | ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಲಿ ನಿಯಮಿತಕ್ಕೆ ಶೇ. 2 ರಂತೆ* | - | 3,51,000-00 | - |
| 3 | ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳಕ್ಕೆ ಶೇ. 1ರಂತೆ* | - | 1,75,500-00 | - |
| 4 | ಸದಸ್ಯರ ಷೇರಿನ ಮೇಲೆ ಡಿವಿಡೆಂಡ್ ಶೇ.15 ರಂತೆ* | - | 1,17,30,300-00 | - |
| 5 | ಕರಡು ಸಾಲದ ನಿಧಿಗೆ | 11,61,00,000-00 | 19,00,000-00 | 11,80,00,000-00 |
| 6 | ಕಟ್ಟಡ ನಿಧಿಗೆ | 3,43,00,000-00 | 27,00,000-00 | 3,70,00,000-00 |
| 7 | ಗುಂತಾಯಿಸಿದ ಹಣದ ಮೇಲೆ ಸವಕಳಿ ನಿಧಿ | 3,37,00,000-00 | 1,00,000-00 | 3,38,00,000-00 |
| 8 | ಗುಂತಾಯಿಸಿದ ಹಣದ ಮೇಲೆ ಏರಿಳಿತ ನಿಧಿ | 1,00,00,000-00 | - | 1,00,00,000-00 |
| 9 | ಸದಸ್ಯರ ಮರಣೋತ್ತರ ಪರಿಹಾರ ನಿಧಿ | 13,57,000-00 | 3,00,000-00 | 16,57,000-00 |
| 10 | ಉತ್ಪಾದನಾ ಆಸ್ತಿಯ ಮೇಲೆ ಘಟನಾಪೇಕ್ಷ ಭಾದ್ಯತೆ | 60,00,000-00 | - | 60,00,000-00 |
| 11 | ಸಿಬ್ಬಂದಿ ಸೌಕರ್ಯ ನಿಧಿ | 1,03,83,931-75 | 1,00,000-00 | 1,04,83,931-75 |
| 12 | ಸಾರ್ವಜನಿಕ ಒಳಿತು ನಿಧಿ | 9,00,000-00 | 1,00,000-00 | 10,00,000-00 |
| 13 | ಧರ್ಮ ನಿಧಿ | 1,85,884-23 | 74,200-00 | 2,60,084-23 |
| 14 | ಲಾಭಾಂಶ ಸಮನ್ವಯ ನಿಧಿ | 45,00,000-00 | - | 45,00,000-00 |
| 15 | ಕರಡು ಸಾಲದ ನಿಧಿ (ಆದಾಯ ತೆರಿಗೆ ಸೆಕ್ಷನ್ 36(1)) | 2,87,77,411-00 | - | 2,87,77,411-00 |
| 16 | ಜ್ಯೂಬಿಲಿ ನಿಧಿ | 31,000-00 | 19,000-00 | 50,000-00 |
| | **ಒಟ್ಟು** | **37,34,10,411-36** | **2,50,73,476-45** | **38,62,27,087-81** |

* ಪಾವತಿಸಬೇಕಾದ ಬಾಬ್ತುಗಳು

**11. ಆಯ–ವ್ಯಯ :**

2016–17ನೇ ಸಾಲಿನ ಅಂದಾಜು ಆಯವ್ಯಯವನ್ನು ಮಹಾಸಭೆಯ ಮಂಜೂರಾತಿಗಾಗಿ ಮಂಡಿಸಲಾಗಿದೆ.

**12. ಡಿವಿಡೆಂಡ್ :**

ಸದಸ್ಯರ ಷೇರು ಹಣದ ಮೇಲೆ ಶೇಕಡ 15 ರಂತೆ ಡಿವಿಡೆಂಡನ್ನು ವಾರ್ಷಿಕ ಮಹಾಸಭೆಯ ಅನುಮತಿ ಪಡೆದು ಹಂಚಲು ತೀರ್ಮಾನಿಸಲಾಗಿದೆ.

**13. ಲೆಕ್ಕಪರಿಶೋಧನೆ:**

2015–16ನೇ ಸಾಲಿನ ಲೆಕ್ಕ ಪರಿಶೋಧನೆಯನ್ನು ಶ್ರೀ ಎನ್. ಚನ್ನಬಸವಣ್ಣ, ಚಾರ್ಟರ್ಡ್ ಅಕೌಂಟೆಂಟ್, ದಾವಣಗೆರೆ ಇವರು ಪರಿಶೋಧನೆ ಮಾಡಿ ವರದಿ ಸಲ್ಲಿಸಿರುತ್ತಾರೆ. ಬ್ಯಾಂಕು ಈ ವರ್ಷವೂ ಸಹ "ಎ" ಆಡಿಟ್ ವರ್ಗದಲ್ಲಿ ಮುಂದುವರೆದಿದೆ.

**14. ಕಾರ್ಯನಿರ್ವಾಹಕ ಸಮಿತಿ ಸಭೆಗಳು :**

ಈ ವರ್ಷದಲ್ಲಿ ಒಟ್ಟು 13 ಕಾರ್ಯನಿರ್ವಾಹಕ ಮಂಡಲಿಯ ಸಭೆಗಳು, 12 ಉಪಸಮಿತಿ ಸಭೆಗಳು ನಡೆದು, ಈ ಸಭೆಗಳಲ್ಲಿ ಎಲ್ಲಾ ಕಾರ್ಯನಿರ್ವಾಹಕ ಮಂಡಲಿಯ ಸದಸ್ಯರು ಸಕ್ರಿಯವಾಗಿ ಭಾಗವಹಿಸಿ ಬ್ಯಾಂಕಿನ ಅಭಿವೃದ್ಧಿಗೆ ಸಲಹೆ ಸೂಚನೆಗಳನ್ನು ನೀಡಿ ಸಹಕರಿಸಿರುತ್ತಾರೆ.

**15.** 2016–17ನೇ ಸಾಲಿಗೆ ಬ್ಯಾಂಕು ರೂ.609 ಕೋಟಿಯವರೆಗೂ ಬಾಹ್ಯ ಮೂಲಗಳಿಂದ ಸಾಲಗಳನ್ನು ಪಡೆಯಲು ಅವಕಾಶವಿರುತ್ತದೆ.

**16. 2016–17ನೇ ಸಾಲಿಗೆ ಉದ್ದೇಶಿಸಿರುವ ಕಾರ್ಯಕ್ರಮಗಳು:**

- ❖ ಬ್ಯಾಂಕಿನ ಕಾರ್ಯಕ್ಷೇತ್ರದ ವ್ಯಾಪ್ತಿಯನ್ನು ಹಾವೇರಿ ಜಿಲ್ಲೆಗೆ ವಿಸ್ತರಿಸುವುದು ಮತ್ತು ಹೊಸ ಶಾಖೆಗಳನ್ನು ತೆರೆಯುವುದು.
- ❖ ಎ.ಟಿ.ಎಮ್. ಸ್ಥಾಪಿಸುವುದು.
- ❖ ಠೇವಣಾತಿಗಳನ್ನು ಮತ್ತು ಸಾಲಗಳನ್ನು ಹೆಚ್ಚಿಸಿ ಬ್ಯಾಂಕಿನ ಪ್ರಗತಿಯನ್ನು ಕಾಯ್ದುಕೊಳ್ಳುವುದು.
- ❖ ಗ್ರಾಸ್ ಎನ್.ಪಿ.ಎ. ಪ್ರಮಾಣವನ್ನು ಕಡಿಮೆ ಮಾಡುವುದು.
- ❖ ಹೊನ್ನಾಳಿ ಶಾಖೆಗೆ ಸ್ವಂತ ನಿವೇಶನದಲ್ಲಿ ಕಟ್ಟಡ ನಿರ್ಮಿಸುವುದು.

**ಕೃತಜ್ಞತೆಗಳು ಹಾಗೂ ಅಭಿನಂದನೆಗಳು:**

ನಮ್ಮ ಬ್ಯಾಂಕಿನ ಪ್ರಗತಿಗೆ ಸಹಕರಿಸಿದ ಮಾನ್ಯ ಸದಸ್ಯರಿಗೆ, ಗ್ರಾಹಕರಿಗೆ, ಠೇವಣಿದಾರರಿಗೆ, ಸಾಲ ಪಡೆದು ಸಕಾಲದಲ್ಲಿ ಸಾಲದ ಕಂತು ಮತ್ತು ಬಡ್ಡಿಯನ್ನು ಮರುಪಾವತಿಸಿ ಬ್ಯಾಂಕಿನ ಅಭಿವೃದ್ಧಿಗೆ ಸಹಕರಿಸಿದ ಎಲ್ಲ ಸದಸ್ಯರಿಗೂ ಹಾಗೂ ಅವಿರತವಾಗಿ ಶ್ರಮಿಸುತ್ತಿರುವ ಬ್ಯಾಂಕಿನ ಸಿಬ್ಬಂದಿ ವರ್ಗದವರಿಗೂ, ಲಕ್ಷ್ಮೀ ಠೇವಣಿ ಸಂಗ್ರಹಕಾರರಿಗೂ ಬ್ಯಾಂಕಿನ ಪ್ರಗತಿಯ ಸಾಧನೆಗೆ ಸೂಕ್ತ ಮಾರ್ಗದರ್ಶನ ಸಲಹೆ ಮತ್ತು ಸೂಚನೆಗಳನ್ನು ನೀಡುತ್ತಿರುವ ರಿಸರ್ವ್ ಬ್ಯಾಂಕ್ ಅಧಿಕಾರಿಗಳಿಗೂ, ಸಹಕಾರ ಸಂಘಗಳ ಇಲಾಖಾ ಅಧಿಕಾರಿಗಳಿಗೂ, ಸಹಕಾರ ಸಂಘಗಳ ಉಪನಿಬಂಧಕರು, ದಾವಣಗೆರೆ ಜಿಲ್ಲೆ, ದಾವಣಗೆರೆ ಮತ್ತು ಸಹಕಾರ ಸಂಘಗಳ ಸಹಾಯಕ ನಿಬಂಧಕರು, ದಾವಣಗೆರೆ ಉಪವಿಭಾಗ, ದಾವಣಗೆರೆ, ಇವರಿಗೂ, ಲೆಕ್ಕ ಪರಿಶೋಧನಾ ಇಲಾಖೆಯವರಿಗೂ, ಬ್ಯಾಂಕಿನ ಆಂತರಿಕ ಲೆಕ್ಕ ಪರಿಶೋಧನೆ ಮಾಡಿದ ಮೆ॥ ಬೆಳಗಾವಿ ಅಂಡ್ ಅಸೋಸಿಯೇಟ್ಸ್, ಚಾರ್ಟರ್ಡ್ ಅಕೌಂಟೆಂಟ್ಸ್, ದಾವಣಗೆರೆ ಹಾಗೂ ಸಕಾಲದಲ್ಲಿ ಬ್ಯಾಂಕಿನ ಶಾಸನ ಬದ್ಧ ಲೆಕ್ಕ ಪರಿಶೋಧನೆ ಮಾಡಿದ ಚಾರ್ಟರ್ಡ್ ಅಕೌಂಟೆಂಟ್‌ರಾದ ಶ್ರೀ ಎನ್. ಚನ್ನಬಸವಣ್ಣ ದಾವಣಗೆರೆ ಇವರಿಗೂ, ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕಿನವರಿಗೂ ಹಾಗೂ ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳ, ಬೆಂಗಳೂರು, ಇವರಿಗೂ, ಕಾನೂನು ಸಲಹೆ ನೀಡುತ್ತಿರುವ ವಕೀಲರುಗಳಿಗೂ, ಬ್ಯಾಂಕಿಗೆ ಆಧಾರ ಮಾಡುವ ಸ್ಥಿರಾಸ್ತಿಗಳ ಮೌಲ್ಯಮಾಪನ ಮಾಡುತ್ತಿರುವ ಇಂಜಿನಿಯರ್‌ಗಳಿಗೂ, ಚಿನ್ನಾಭರಣಗಳ ಮೌಲ್ಯಮಾಪನ ಮಾಡುತ್ತಿರುವ ಮೌಲ್ಯ ಮಾಪಕರಿಗೂ, ದಾವಣಗೆರೆ ಜಿಲ್ಲಾ ಪಟ್ಟಣ ಸಹಕಾರ ಬ್ಯಾಂಕುಗಳ ಒಕ್ಕೂಟದವರಿಗೂ, ಜಿಲ್ಲಾ ಸಹಕಾರ ಯೂನಿಯನ್, ದಾವಣಗೆರೆ ಇವರಿಗೂ ನಾವು ಹೃತ್ಪೂರ್ವಕ ಧನ್ಯವಾದಗಳನ್ನು ಅರ್ಪಿಸುತ್ತೇವೆ. ನಮ್ಮ ಬ್ಯಾಂಕಿನ ಹಿರಿಯ ಸಹಾಯಕರಾಗಿದ್ದ ಶ್ರೀ ಎಂ. ಮಲ್ಲಿಕಾರ್ಜುನಯ್ಯ ನಿವೃತ್ತಿಯನ್ನು ಹೊಂದಿದ್ದು ಅವರು ಬ್ಯಾಂಕಿಗೆ ಸಲ್ಲಿಸಿದ ಸೇವೆಯು ಗಮನಾರ್ಹವಾಗಿರುತ್ತದೆ.

ಕಾರ್ಯನಿರ್ವಾಹಕ ಮಂಡಲಿ ಪರವಾಗಿ

B.C. Umapathy

**(ಬಿ.ಸಿ. ಉಮಾಪತಿ)**

ಅಧ್ಯಕ್ಷರು

## 2015–16 ನೇ ಸಾಲಿನ ಆಯ–ವ್ಯಯಕ್ಕಿಂತ ಹೆಚ್ಚುವರಿ ಆದ ಖರ್ಚು ಮತ್ತು 2016–17 ನೇ ಸಾಲಿನ ಅಂದಾಜು ಆಯ–ವ್ಯಯ ಪತ್ರಿಕೆ

| ಕ್ರ. ಸಂ. | ವಿವರಗಳು | 2015–16ರ ಮಂಜೂರಾದ ಬಡ್ಜೆಟ್ | 2015–16 ರ ಖರ್ಚು ಆದದ್ದು | ಹೆಚ್ಚುವರಿಯಾದ ಖರ್ಚು | 2016–17 ನೇ ಸಾಲಿನ ಅಂದಾಜು | |
|---|---|---|---|---|---|---|
| | | | | | ಖರ್ಚು ರೂ. | ಆದಾಯ ರೂ. |
| 1 | ಸಿಬ್ಬಂದಿ ಸಂಬಳ ಮತ್ತು ಭವಿಷ್ಯ ನಿಧಿ | 3,00,00,000–00 | 2,70,38,753–00 | | 3,00,00,000–00 | |
| 2 | ಮುದ್ರಣ, ಲೇಖನ ಸಾಮಗ್ರಿಗಳು ಮತ್ತು ಜಾಹಿರಾತು | 10,00,000–00 | 1,60,120–00 | | 5,00,000–00 | |
| 3 | ಬಾಡಿಗೆ, ಕಂದಾಯ, ವಿದ್ಯುತ್ ಮತ್ತು ವಿಮೆ | 65,00,000–00 | 94,84,309–00 | 29,84,309–00 | 1,20,00,000–00 | |
| 4 | ಅಂಚೆ ಮತ್ತು ತಂತಿ | 3,00,000–00 | 2,54,497–90 | | 5,00,000–00 | |
| 5 | ಪ್ರವಾಸ ಭತ್ಯೆ | 1,00,000–00 | 15,787–00 | | 1,00,000–00 | |
| 6 | ವಾರ್ಷಿಕ ಮಹಾಸಭೆಯ ವೆಚ್ಚ | 7,00,000–00 | 5,78,986–00 | | 7,00,000–00 | |
| 7 | ನಿರ್ದೇಶಕರ ಸಭೆಯ ವೆಚ್ಚ | 1,00,000–00 | 99,400–00 | | 2,00,000–00 | |
| 8 | ತನಿಖಾ ಶುಲ್ಕ ಮತ್ತು ಮಾರಾಟಾಧಿಕಾರಿಯವರ ವೇತನ | 10,00,000–00 | 10,66,698–00 | 66,698–00 | 14,00,000–00 | |
| 9 | ಬಡ್ಡಿ ಮತ್ತು ಕಮೀಷನ್ | 16,50,00,000–00 | 16,20,31,878–55 | | 17,00,00,000–00 | 19,00,00,000–00 |
| 10 | ಚಂದಾ ವಗೈರೆ | 1,00,000–00 | 65,789–00 | | 1,00,000–00 | |
| 11 | ನವೀಕರಣ ಮತ್ತು ದುರಸ್ತಿ | 15,00,000–00 | 8,49,523–00 | | 10,00,000–00 | |
| 12 | ಸವಕಳಿ | 35,00,000–00 | 55,12,685–00 | 20,12,685–00 | 40,00,000–00 | |
| 13 | ಕಾನೂನು ಸಲಹೆ ವೆಚ್ಚ | 5,00,000–00 | 2,51,020–00 | | 5,00,000–00 | |
| 14 | ಲಕ್ಷ್ಮಿ ಠೇವಣಿ ಸಂಗ್ರಹಕಾರರ ಕಮೀಷನ್ | 37,00,000–00 | 34,15,051–00 | | 40,00,000–00 | |
| 15 | ಇತರೆ | 30,00,000–00 | 23,06,947–75 | | 30,00,000–00 | 40,00,000–00 |
| 16 | ಕಂಪ್ಯೂಟರ್ ಮತ್ತು ಜೆರಾಕ್ಸ್ ನಿರ್ವಹಣೆ | 20,00,000–00 | 12,79,111–00 | | 20,00,000–00 | |
| 17 | ಆದಾಯ ತೆರಿಗೆ | – | 39,05,010–00 | | | |
| 18 | ಗುಂತಾಯಿಸಿದ ಹಣದ ಮೇಲಿನ ಆದಾಯ | – | | | – | 8,60,00,000–00 |
| 19 | ಆದಾಯ | 5,00,00,000–00 | 5,14,89,839–45 | | 5,00,00,000–00 | |
| | **ಒಟ್ಟು** | **26,90,00,000–00** | **26,98,05,405–65** | **50,63,692–00** | **28,00,00,000–00** | **28,00,00,000–00** |

## ದಿ ದಾವಣಗೆರೆ ಅರ್ಬನ್ ಕೋ–

ದಿನಾಂಕ: 31–03–2016 ಕ್ಕೆ ಇದ್ದಂತೆ

| 31–03–2015 ರೂ. ಪೈ. | ಖರ್ಚು | | 31–03–2016 ರೂ. ಪೈ. |
|---|---|---|---|
| 15,28,93,130–13 | ಠೇವಣಿಗಳ ಮತ್ತು ತಂದ ಸಾಲಗಳ ಮೇಲೆ ಕೊಟ್ಟ ಬಡ್ಡಿ | | 16,20,31,878–55 |
| 2,67,73,686–00 | ಸಂಬಳ, ಭತ್ಯೆ ಮತ್ತು ಭವಿಷ್ಯ ನಿಧಿ | | 2,70,38,753–00 |
| 59,000–00 | ಆಡಳಿತ ಮಂಡಲಿಯ ಸದಸ್ಯರುಗಳ ಭತ್ಯೆ | | 99,400–00 |
| 61,69,791–20 | ಬಾಡಿಗೆ, ತೆರಿಗೆಗಳು, ವಿಮೆ ಮತ್ತು ವಿದ್ಯುಚ್ಛಕ್ತಿ ಖರ್ಚುಗಳು | | 94,84,309–00 |
| 2,54,600–00 | ಕಾನೂನು ಖರ್ಚುಗಳು | | 2,51,020–00 |
| 2,56,041–95 | ಅಂಚೆ, ತಂತಿ ಮತ್ತು ದೂರವಾಣಿ ಖರ್ಚು | | 2,54,497–90 |
| 6,33,521–00 | ಲೆಕ್ಕ ಪರಿಶೋಧಕರ ಮತ್ತು ಮಾರಾಟಾಧಿಕಾರಿಗಳ ಸಂಬಳ | | 10,66,698–00 |
| 42,12,387–00 | ಆಸ್ತಿಗಳ ಮೇಲೆ ಸವಕಳಿ ಮತ್ತು ದುರಸ್ತಿ ಖರ್ಚು | | 63,62,208–00 |
| 6,62,651–98 | ಮುದ್ರಣ, ಲೇಖನ ಸಾಮಗ್ರಿಗಳು ಮತ್ತು ಜಾಹಿರಾತು | | 1,60,120–00 |
| 33,70,718–00 | ಲಕ್ಷ್ಮಿ ಠೇವಣಿ ಸಂಗ್ರಹಕಾರರ ಕಮಿಷನ್ | | 34,15,051–00 |
| 5,25,827–00 | ವಾರ್ಷಿಕ ಮಹಾಸಭೆಯ ಖರ್ಚು | | 5,78,986–00 |
| 0–00 | ಆದಾಯ ತೆರಿಗೆ | | 39,05,010–00 |
| 41,26,067–89 | ಇತರೆ ಖರ್ಚುಗಳು | | 36,67,634–75 |
| **8,35,64,544–49** | ಲಾಭ (ಆದಾಯ ತೆರಿಗೆ ಹಾಗೂ ಇತರೆ ಅವಕಾಶಗಳಿಗೆ ವಜಾ ಮಾಡುವ ಮೊದಲು) | | **5,14,89,839–45** |
| **28,35,01,966–64** | **ಜುಮ್ಲಾ** | | **26,98,05,405–65** |
| | **ಆದಾಯ ತೆರಿಗೆ ಹಾಗೂ ಇತರೆ ಅವಕಾಶಗಳು** | | |
| 62,00,000–00 | 1. ಕರಡು ಸಾಲದ ನಿಧಿಗೆ (ಆದಾಯ ತೆರಿಗೆ ಸೆಕ್ಷನ್ (36(1)) | 45,00,000–00 | |
| 2,54,50,000–00 | 2. ಆದಾಯ ತೆರಿಗೆ ಪಾವತಿಸಬೇಕಾದ್ದು | 1,65,00,000–00 | |
| 10,00,000–00 | 3. ಉತ್ಪಾದನಾ ಆಸ್ತಿಯ ಮೇಲೆ ಘಟನಾಪೇಕ್ಷ ಭಾದ್ಯತೆ | 0–00 | |
| 35,00,000–00 | 4. ದೀರ್ಘಾವಧಿ ಸಾಲದ ಮೇಲೆ ಬಂದಂತಹ ಆದಾಯದ ಮೇಲೆ ಅವಕಾಶ | 15,00,000–00 | |
| 35,43,156–00 | 5. ಸಿಬ್ಬಂದಿಗೆ ಎಕ್ಸ್‌ಗ್ರೇಷಿಯಾ | 36,66,363–00 | |
| 2,50,000–00 | 6. ಆಡಿಟ್ ಫೀ ಪಾವತಿಸಬೇಕಾದ್ದು | 2,50,000–00 | |
| 75,00,000–00 | 7. ಗುಂತಾಯಿಸಿದ ಹಣದ ಮೇಲೆ ಏರಿಳಿತ ನಿಧಿ | 0–00 | |
| 4,74,43,156–00 | | | 2,64,16,363–00 |
| **3,61,21,388–49** | **ನಿವ್ವಳ ಲಾಭ** | | **2,50,73,476–45** |
| **8,35,64,544–49** | **ಜುಮ್ಲಾ** | | **5,14,89,839–45** |

ದಿನಾಂಕ: 25–08–2016 ರಂದು ನಡೆದ ಕಾರ್ಯನಿರ್ವಾಹಕ ಮಂಡಲಿ ಸಭೆಯಲ್ಲಿ ಅಂಗೀಕರಿಸಲಾಗಿದೆ.

**ಉಮೇಶ್ ಎಸ್. ರೋಣದ್**
ಪ್ರಧಾನ ವ್ಯವಸ್ಥಾಪಕರು

**ಕೋಗುಂಡಿ ಬಕ್ಕೇಶಪ್ಪ**
ಉಪಾಧ್ಯಕ್ಷರು

**ಬಿ.ಸಿ. ಉಮಾಪತಿ**
ಅಧ್ಯಕ್ಷರು

ಕಾರ್ಯನಿರ್ವಾಹಕ ಮಂಡಲಿ ಸದಸ್ಯರು :

**ಮುಂಡಾಸ್ ವೀರೇಂದ್ರ**
ಚಾರ್ಟರ್ಡ್ ಅಕೌಂಟೆಂಟ್, ನಿರ್ದೇಶಕರು

**ಪಲ್ಲಾಗಟ್ಟಿ ಶಿವಾನಂದಪ್ಪ**
ನಿರ್ದೇಶಕರು

**ದೇವರಮನಿ ಶಿವಕುಮಾರ್**
ನಿರ್ದೇಶಕರು

# ಆಪ್. ಬ್ಯಾಂಕ್ ಲಿ., ದಾವಣಗೆರೆ

## ಲಾಭ – ಹಾನಿ ಪತ್ರಿಕೆ

| 31–03–2015 ರೂ. ಪೈ. | ಆದಾಯ | 31–03–2016 ರೂ. ಪೈ. |
|---|---|---|
| 19,52,27,775–33 | ಸಾಲ ಮತ್ತು ಮುಂಗಡಗಳ ಮೇಲೆ ಬಂದ ಬಡ್ಡಿ | 17,19,31,466–35 |
| 8,53,42,928–15 | ವಿನಿಯೋಗಗಳ ಮೇಲೆ ಬಂದ ಆದಾಯ | 9,39,34,237–70 |
| 29,31,263–16 | ಇತರೆ ಜಮಾಗಳು | 39,39,701–60 |
| **28,35,01,966–64** | **ಜುಮ್ಲಾ** | **26,98,05,405–65** |
| 8,35,64,544–49 | ಲಾಭ ಮೇಲಿನಂತೆ ಬಂದಂತೆ | 5,14,89,839–45 |
| **8,35,64,544–49** | **ಜುಮ್ಲಾ** | **5,14,89,839–45** |

ಸಹಿ/–
**ಎನ್. ಚನ್ನಬಸವಣ್ಣ**
ಚಾರ್ಟರ್ಡ್ ಅಕೌಂಟೆಂಟ್
ಎಂ.ನಂ. 213853
ಮಾಲೀಕರು
ಮೆ॥ ಚನ್ನಬಸವಣ್ಣ ಅಂಡ್ ಕೊ. ದಾವಣಗೆರೆ.
ಎಫ್ ಆರ್.ನಂ. 010580S

ದಿನಾಂಕ : 06–08–2016
ಸ್ಥಳ : ದಾವಣಗೆರೆ

## ದಿ ದಾವಣಗೆರೆ ಅರ್ಬನ್ ಕೋ–

ದಿನಾಂಕ: 31–03–2016 ಕ್ಕೆ ಇದ್ದಂತೆ

| 31–03–2015 ರೂ. ಪೈ. | ಬಂಡವಾಳ ಮತ್ತು ಜವಾಬ್ದಾರಿಗಳು | | 31–03–2016 ರೂ. ಪೈ. |
|---|---|---|---|
| **7,67,48,450–00** | **ಬಂಡವಾಳ** | | **8,19,92,500–00** |
| | ವ್ಯಕ್ತಿಗತ ಮತ್ತು ಪಾಲುದಾರಿಕೆ ಸಂಸ್ಥೆಗಳಿಂದ | | |
| | ರೂ.100 ಮೌಲ್ಯದ 819925 ಷೇರುಗಳು | | |
| **34,49,77,689–37** | **ಆಪದ್ದನ ಮತ್ತು ಇತರೆ ನಿಧಿಗಳು** | | **37,34,10,411–36** |
| **33,50,73,807–39** | | **36,05,52,595–38** | |
| 11,57,03,046–39 | ಆಪದ್ಧನ | 12,71,75,184–38 | |
| 3,05,30,500–00 | ಕಟ್ಟಡ ನಿಧಿ | 3,43,00,000–00 | |
| 35,00,000–00 | ಲಾಭಾಂಶ ಸಮನ್ವಯ ನಿಧಿ | 45,00,000–00 | |
| 11,25,62,850–00 | ಕರಡು ಸಾಲದ ನಿಧಿ | 11,61,00,000–00 | |
| 2,42,77,411–00 | ಕರಡು ಸಾಲದ ನಿಧಿ (ಆದಾಯ ತೆರಿಗೆ ಸೆಕ್ಷನ್ (36(1)) | 2,87,77,411–00 | |
| 3,25,00,000–00 | ಗುಂತಾಯಿಸಿದ ಹಣದ ಮೇಲೆ ಸವಕಳಿ ನಿಧಿ | 3,37,00,000–00 | |
| 1,00,00,000–00 | ಗುಂತಾಯಿಸಿದ ಹಣದ ಮೇಲೆ ಏರಿಳಿತ ನಿಧಿ | 1,00,00,000–00 | |
| 60,00,000–00 | ಉತ್ಪಾದನಾ ಆಸ್ತಿಯ ಮೇಲೆ ಘಟನಾಪೇಕ್ಷ ಬಾಧ್ಯತೆ ನಿಧಿ | 60,00,000–00 | |
| **99,03,881–98** | **ಇತರೆ ನಿಧಿಗಳು ಮತ್ತು ಕಾಯ್ದಿರಿಸಿದ ನಿಧಿಗಳು** | **1,28,57,815–98** | |
| 88,16,289–75 | ಸಿಬ್ಬಂದಿ ಸೌಕರ್ಯನಿಧಿ | 1,03,83,931–75 | |
| 4,00,000–00 | ಸಾರ್ವಜನಿಕ ಒಳಿತು ನಿಧಿ | 9,00,000–00 | |
| 30,592–23 | ಧರ್ಮನಿಧಿ | 1,85,884–23 | |
| 6,57,000–00 | ಸದಸ್ಯರ ಮರಣೋತ್ತರ ಪರಿಹಾರ ನಿಧಿ | 13,57,000–00 | |
| 0–00 | ಜ್ಯುಬಲಿ ನಿಧಿ | 31,000–00 | |
| **206,19,27,165–52** | **ಠೇವಣಿಗಳು ಮತ್ತು ಇತರೆ ಖಾತೆಗಳು** | | **230,64,11,942–21** |
| **158,00,37,162–47** | **ಖಾಯಂ ಠೇವಣಿಗಳು** | **173,74,61,979–02** | |
| 157,27,83,162–47 | ವ್ಯಕ್ತಿಗಳಿಂದ | 172,57,75,696–02 | |
| 72,54,000–00 | ಇತರೆ ಸಂಸ್ಥೆಗಳಿಂದ | 1,16,86,283–00 | |
| **33,42,14,249–42** | **ಉಳಿತಾಯ ಠೇವಣಿಗಳು** | **41,03,06,567–25** | |
| 32,99,48,249–42 | ವ್ಯಕ್ತಿಗಳಿಂದ | 40,67,01,771–05 | |
| 42,66,000–00 | ಇತರೆ ಸಂಸ್ಥೆಗಳಿಂದ | 36,04,796–20 | |
| **14,27,28,165–89** | **ಚಾಲ್ತಿ ಠೇವಣಿಗಳು** | **15,49,02,766–20** | |
| 14,03,26,165–89 | ವ್ಯಕ್ತಿಗಳಿಂದ | 14,84,89,541–81 | |
| 24,02,000–00 | ಇತರೆ ಸಂಘಗಳಿಂದ | 64,13,224–39 | |
| **49,47,587–74** | **ಇತರೆ ಠೇವಣಿಗಳು** | **37,40,629–74** | |
| 49,47,587–74 | ವಾಯಿದೆ ಮೀರಿದ ಠೇವಣಿ | 37,40,629–74 | |
| 0–00 | **ಪಡೆದ ಸಾಲಗಳು** | | 0–00 |
| – | ಅಲ್ಪಾವಧಿ ಸಾಲಗಳು | – | |
| – | ಮಧ್ಯಮಾವಧಿ ಸಾಲಗಳು | – | |
| **5,68,481–94** | **ವಸೂಲಾಗತಕ್ಕ ಮತ್ತು ವಸೂಲಿಗೆ ಬಂದಿರುವ ಬಿಲ್ಲುಗಳು** | | **9,282–00** |
| **34,24,160–00** | **ಶಾಖೆಗಳ ಹೊಂದಾಣಿಕೆ** | | **8,85,495–00** |
| **8,91,04,644–96** | **ಕಟ್ಟುಬಾಕಿ ಬಡ್ಡಿ ಮೀಸಲು** | | **8,62,83,686–86** |
| **23,76,289–00** | **ಕೊಡಬೇಕಾದ ಬಡ್ಡಿ** | | **26,90,417–00** |
| **257,91,26,880–79** | **ಮುಂದಿನ ಪುಟಕ್ಕೆ** | | **285,16,83,734–43** |

# ಆಪ್. ಬ್ಯಾಂಕ್ ಲಿ., ದಾವಣಗೆರೆ

## ಅಢಾವೆ ಪತ್ರಿಕೆ

| 31-03-2015 ರೂ. ಪೈ. | ಸ್ವತ್ತು ಮತ್ತು ಆಸ್ತಿ | | 31-03-2016 ರೂ. ಪೈ. |
|---|---|---|---|
| **29,95,77,820-78** | **ನಗದು** | | **24,50,51,261-38** |
| 2,09,73,338-00 | ಬ್ಯಾಂಕಿನಲ್ಲಿರುವ ನಗದು | 2,09,02,349-00 | |
| | ಎಸ್.ಬಿ.ಐ ಮತ್ತು ಇತರೆ ಸಮವರ್ತಿ ಬ್ಯಾಂಕುಗಳಲ್ಲಿ ಹಾಗೂ ಕೆ.ಎಸ್.ಸಿ. ಅಪೆಕ್ಸ್ ಬ್ಯಾಂಕ್, ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕುಗಳಲ್ಲಿ | | |
| 6,86,61,278-78 | ಚಾಲ್ತಿ ಖಾತೆ | 3,92,05,708-38 | |
| 20,99,43,204-00 | ಖಾಯಂ ಠೇವಣಿ | 18,49,43,204-00 | |
| **29,61,28,370-99** | **ಇತರೆ ಬ್ಯಾಂಕಿನಲ್ಲಿ ಶಿಲ್ಕು** | | **49,09,23,146-66** |
| 85,98,370-99 | ಚಾಲ್ತಿ ಖಾತೆ | 5,33,93,146-66 | |
| 28,75,30,000-00 | ಖಾಯಂ ಠೇವಣಿ | 43,75,30,000-00 | |
| 0-00 | ಕಾಲ್‌ಮನಿ ಹೂಡಿಕೆ | | 0-00 |
| **50,26,13,810-00** | **ಸಂಚಯಗಳು** | | **63,05,49,323-00** |
| 50,24,11,310-00 | ಕೇಂದ್ರ/ರಾಜ್ಯ ಸರ್ಕಾರದ ಭದ್ರತಾ ಪತ್ರಗಳು | 56,03,46,823-00 | |
| 50,24,11,310-00 | ಪುಸ್ತಕ ಬೆಲೆ | 56,03,46,823-00 | |
| 50,00,00,000-00 | ಮುಖಬೆಲೆ | 56,00,00,000-00 | |
| 49,37,56,310-00 | ಮಾರುಕಟ್ಟೆ ಬೆಲೆ | 55,27,14,823-00 | |
| 2,02,500-00 | ಸಹಕಾರಿ ಸಂಘಗಳ ಷೇರುಗಳು | 2,02,500-00 | |
| 0-00 | ಇತರೆ | 7,00,00,000-00 | |
| **139,64,33,939-44** | **ಸಾಲಗಳು** | | **138,46,64,628-33** |
| **74,41,99,939-44** | ಅಲ್ಪಾವಧಿ ಸಾಲಗಳು ರೋಖ ಪತ್ರಗಳು ಓವರ್ ಡ್ರಾಫ್ಟ್‌ಗಳು | **73,81,07,628-33** | |
| 72,81,73,939-44 | ಬಿಲ್ಲುಗಳು ಸೋಡಿ ಅವುಗಳಲ್ಲಿ ವಾಸ್ತವಿಕ ಭದ್ರತೆಗಳ ಮೇಲೆ | 72,48,90,936-33 | |
| 74,41,99,939-44 | ಅವುಗಳಲ್ಲಿ ವ್ಯಕ್ತಿಗಳಿಂದ ಬರಬೇಕಾದ ಬಾಕಿ | 73,81,07,628-33 | |
| 1,53,38,919-25 | ಅವುಗಳಲ್ಲಿ ಸುಸ್ತಿಯಾದ ಬಾಕಿ | 1,52,15,078-00 | |
| **42,26,16,000-00** | **ಮಧ್ಯಮಾವಧಿ ಸಾಲಗಳು** | **37,96,58,000-00** | |
| 42,26,16,000-00 | ಅವುಗಳಲ್ಲಿ ಸ್ವತ್ತುಗಳ ಆಧಾರದ ಮೇಲೆ | 37,96,58,000-00 | |
| 42,26,16,000-00 | ಅವುಗಳಲ್ಲಿ ವ್ಯಕ್ತಿಗಳಿಂದ ಬರಬೇಕಾದ ಬಾಕಿ | 37,96,58,000-00 | |
| 39,22,559-29 | ಅವುಗಳಲ್ಲಿ ಸುಸ್ತಿಯಾದ ಬಾಕಿ | 26,84,144-00 | |
| **22,96,18,000-00** | **ದೀರ್ಘಾವಧಿ ಸಾಲಗಳು** | **26,68,99,000-00** | |
| 22,96,18,000-00 | ಅವುಗಳಲ್ಲಿ ಸ್ವತ್ತುಗಳ ಆಧಾರದ ಮೇಲೆ | 26,68,99,000-00 | |
| 22,96,18,000-00 | ಅವುಗಳಲ್ಲಿ ವ್ಯಕ್ತಿಗಳಿಂದ ಬರಬೇಕಾದ ಬಾಕಿ | 26,68,99,000-00 | |
| 2,12,09,478-24 | ಅವುಗಳಲ್ಲಿ ಸುಸ್ತಿಯಾದ ಬಾಕಿ | 1,99,97,899-00 | |
| **249,47,53,941-21** | **ಮುಂದಿನ ಪುಟಕ್ಕೆ** | | **275,11,88,359-37** |

## ದಿ ದಾವಣಗೆರೆ ಅರ್ಬನ್ ಕೋ –

**ದಿನಾಂಕ: 31–03–2016 ಕ್ಕೆ ಇದ್ದಂತೆ**

| 31–03–2015<br>ರೂ. ಪೈ. | ಬಂಡವಾಳ ಮತ್ತು ಜವಾಬ್ದಾರಿಗಳು | | | 31–03–2016<br>ರೂ. ಪೈ. |
|---|---|---|---|---|
| **257,91,26,880–79** | **ಹಿಂದಿನ ಪುಟದಿಂದ** | | | **285,16,83,734–43** |
| **3,40,83,404–83** | **ಇತರೆ ಜವಾಬ್ದಾರಿಗಳು** | | | **3,54,43,112–35** |
| 30,95,775–45 | ಪಾವತಿಯಾಗಬೇಕಾಗಿದ್ದ ಹುಂಡಿಗಳು | | 77,83,440–91 | |
| 25,85,210–00 | ಪಡೆಯದಿರುವ ಲಾಭಾಂಶ | | 24,38,046–00 | |
| 25,29,383–38 | ಸಂಡ್ರಿ ಬಾಬ್ತುಗಳು | | 12,33,282–44 | |
| 2,43,203–00 | ಸಹಕಾರಿ ಅಭಿವೃದ್ಧಿ ನಿಧಿ | | 2,43,203–00 | |
| 2,60,000–00 | ಆಡಿಟ್ ಫೀ ಪಾವತಿಯಾಗಬೇಕಾದದ್ದು | | 2,50,000–00 | |
| 1,14,30,019–00 | ಆದಾಯ ತೆರಿಗೆ ಅವಕಾಶ | | 57,30,019–00 | |
| 35,43,156–00 | ಸಿಬ್ಬಂದಿಗೆ ಎಕ್ಸ್‌ಗ್ರೇಷಿಯಾ ಅವಕಾಶ | | 36,66,363–00 | |
| 88,17,000–00 | ದೀರ್ಘಾವದಿ ಸಾಲದ ಮೇಲೆ ಬಂದಂತಹ ಆದಾಯದ ಮೇಲೆ ಅವಕಾಶ | | 1,03,17,000–00 | |
| 11,01,000–00 | ಲಾಕರ್ ಬಾಡಿಗೆ ಮುಂಗಡ ಠೇವಣಿ | | 19,62,000–00 | |
| 32,699–00 | ಬಿಲ್ಸ್ ಫಾರ್ ಕಲೆಕ್ಷನ್ | | 16,240–00 | |
| 4,45,959–00 | ಕಂಪ್ಯೂಟರ್ ಮೆಂಟೆನೆನ್ಸ್ ಪೇಯಬಲ್ | | 0–00 | |
| 0–00 | ಟಿ.ಡಿ.ಎಸ್. ಪೇಯಬಲ್ | | 18,03,518–00 | |
| **3,61,21,388–49** | **ಲಾಭ–ನಷ್ಟ ಖಾತೆ** | | | **2,50,73,476–45** |
| | ಕಳೆದ ವರ್ಷದ ಅಢಾವೆ ಪತ್ರಿಕೆ ಲಾಭ | | 3,61,21,388–49 | |
| | ವಿನಿಯೋಗಿಸಿದ್ದು | | 3,61,21,388–49 | |
| | ಈ ಸಾಲಿನ ನಿವ್ವಳ ಲಾಭ | | **2,50,73,476–45** | |
| | **ಷರಾ : ಈ ಸಾಲಿನಲ್ಲಿ ಗಳಿಸಿದ ಲಾಭ** | | **5,14,89,839–45** | |
| | **ಆದಾಯ ತೆರಿಗೆ ಹಾಗೂ ಇತರೆ ಅವಕಾಶಗಳು** | | | |
| | 1. ಕರಡು ಸಾಲದ ನಿಧಿಗೆ (ಆದಾಯ ತೆರಿಗೆ) | 45,00,000–00 | | |
| | 2. ಸಿಬ್ಬಂದಿಗೆ ಎಕ್ಸ್‌ಗ್ರೇಷಿಯಾ | 36,66,363–00 | | |
| | 3. ಆದಾಯ ತೆರಿಗೆ (ಅವಕಾಶ) | 1,65,00,000–00 | | |
| | 4. ದೀರ್ಘಾವಧಿ ಸಾಲದ ಮೇಲೆ ಬಂದಂತಹ ಆದಾಯದ ಮೇಲೆ ಅವಕಾಶ | 15,00,000–00 | | |
| | 5. ಆಡಿಟ್ ಫೀ ಪಾವತಿಸಬೇಕಾದ್ದು | 2,50,000–00 | **2,64,16,363–00** | |
| | **ನಿವ್ವಳ ಲಾಭ** | | **2,50,73,476–45** | |
| **264,93,31,674–11** | **ಜುಮ್ಲಾ** | | | **291,22,00,323–23** |
| **1,62,20,069–99** | **ಘಟನಾಪೇಕ್ಷ ಬಾಧ್ಯತೆಗಳು** | | | **1,12,33,569–99** |
| | ಸ್ವೀಕಾರ ಸಮ್ಮತಿ ಲೇಖ ಮತ್ತು ಇತರೆ ಜವಾಬ್ದಾರಿಗಳು | | | |
| 1,62,20,069–99 | ಆಧಾರ ಸಹಿತ | | 1,12,33,569–99 | |
| 0–00 | ಆಧಾರ ರಹಿತ | | 0–00 | |

## ಆಪ್. ಬ್ಯಾಂಕ್ ಲಿ., ದಾವಣಗೆರೆ

### ಅಢಾವೆ ಪತ್ರಿಕೆ

| 31-03-2015 ರೂ. ಪೈ. | ಸ್ವತ್ತು ಮತ್ತು ಆಸ್ತಿ | | 31-03-2016 ರೂ. ಪೈ. |
|---|---|---|---|
| **249,47,53,941-21** | **ಹಿಂದಿನ ಪುಟದಿಂದ** | | **275,11,88,359-37** |
| **5,68,481-94** | ವಸೂಲಾಗತಕ್ಕ ಮತ್ತು ವಸೂಲಿಗೆ ಕಳಿಸಿರುವ ಬಿಲ್ಲುಗಳು | | **9,282-00** |
| **2,58,16,771-00** | ಕಟ್ಟಡಗಳು (ಸವಕಳಿ ತೆಗೆದು) | | **2,33,00,700-00** |
| **98,64,000-00** | ಪೀಠೋಪಕರಣಗಳು ಮತ್ತು ಮುಟ್ಟುಗಳು | | **1,07,58,600-00** |
| **8,91,04,644-96** | ಬರಬೇಕಾದ ಬಡ್ಡಿ | | **8,62,83,686-86** |
| **0-00** | ಶಾಖೆಗಳ ಹೊಂದಾಣಿಕೆ | | **0-00** |
| **2,92,23,835-00** | **ಇತರೆ ಆಸ್ತಿಗಳು** | | **4,06,59,695-00** |
| 27,47,000-00 | ಗಣಕ ಯಂತ್ರಗಳು (ಕಂಪ್ಯೂಟರ್) | 13,93,150-00 | |
| 17,32,200-00 | ಮುಂಗಡ ಖಾತೆ | 17,00,300-00 | |
| 23,251-00 | ದೂರವಾಣಿ ಖಾತೆ | 20,557-00 | |
| 5,40,156-00 | ಆದಾಯ ತೆರಿಗೆ (ಟಿ.ಡಿ.ಎಸ್.) | 5,40,156-00 | |
| 1,62,82,465-00 | ತೊಡಗಣೆ ಮೇಲೆ ಬರಬೇಕಾದ ಬಡ್ಡಿ | 2,75,66,585-00 | |
| 56,900-00 | ಜೆರಾಕ್ಸ್ ಯಂತ್ರ | 48,300-00 | |
| 14,75,808-00 | ಮುದ್ರಣ ಮತ್ತು ಲೇಖನ ಸಾಮಗ್ರಿಗಳ ದಾಸ್ತಾನು | 21,50,033-00 | |
| 1,06,050-00 | ಕೆ.ಇ.ಬಿ. ಠೇವಣಿ | 1,37,320-00 | |
| 51,84,740-00 | ಮುಂಗಡ ಆದಾಯ ತೆರಿಗೆ | 51,84,740-00 | |
| 10,16,200-00 | ಯಂತ್ರೋಪಕರಣ | 12,14,700-00 | |
| 59,065-00 | ಇ- ಸ್ಟಾಂಪ್ ಠೇವಣಿ | 99,038-00 | |
| 0-00 | ಕಂಪ್ಯೂಟರ್ ತಂತ್ರಾಂಶ | 6,04,816-00 | |
| **0-00** | ಕ್ಲೇಮ್‌ಗಳ ಇತ್ಯರ್ಥದ ಸಂಬಂಧದಲ್ಲಿ ಸ್ವಾಧೀನಪಡಿಸಿಕೊಂಡ ಬ್ಯಾಂಕೇತರ ಆಸ್ತಿಗಳು | | **0-00** |
| **264,93,31,674-11** | **ಜುಮ್ಲಾ** | | **291,22,00,323-23** |
| **1,62,20,069-99** | **ಸಾದಿಲ್ವಾರು ಜವಾಬ್ದಾರಿ** | | **1,12,33,569-99** |
| | ಸಂಘಟಕ ಜವಾಬ್ದಾರಿ ಸ್ವೀಕೃತ ಮತ್ತು ಇತರೆ ಬಾಧ್ಯತೆ | | |
| 1,62,20,069-99 | ಆಧಾರ ಸಹಿತ | 1,12,33,569-99 | |
| 0-00 | ಆಧಾರ ರಹಿತ | 0-00 | |

## ದಿ ದಾವಣಗೆರೆ ಅರ್ಬನ್ ಕೋ-ಆಪ್. ಬ್ಯಾಂಕ್ ಲಿ., ದಾವಣಗೆರೆ

## ಭಾರತೀಯ ರಿಸರ್ವ್ ಬ್ಯಾಂಕಿನ ಸುತ್ತೋಲೆಯಂತೆ ಆಸ್ತಿ-ಜವಾಬ್ದಾರಿ ತಃಖ್ತೆಗಳಿಗೆ ತೋರಿಸಿದ ಅಂಶಗಳ ಬಗ್ಗೆ ಟಿಪ್ಪಣಿಗಳು

1. ದಿನಾಂಕ 31-03-2016ಕ್ಕೆ ಬ್ಯಾಂಕಿನ ಸಿ.ಆರ್.ಎ.ಆರ್. (Capital to Risk Asset Ratio) ಪ್ರಮಾಣವು ಶೇಕಡ 18.76ರಷ್ಟು ಇರುವುದು.
2. ತೊಡಗಣೆಗಳ ಮುಖಬೆಲೆ ಪುಸ್ತಕಬೆಲೆ ಮತ್ತು ಮಾರುಕಟ್ಟೆ ಬೆಲೆಗಳನ್ನು ಅಥಾವೆ ಪತ್ರಿಕೆಯಲ್ಲಿ ನಮೂದಿಸಿದೆ.
3. (ಅ) ರಿಯಲ್ ಎಸ್ಟೇಟ್ ಮತ್ತು ಕನ್‌ಸ್ಟ್ರಕ್ಷನ್‌ರವರಿಗೆ ಈ ಸಾಲಿನಲ್ಲಿ ಸಾಲವನ್ನು ಕೊಟ್ಟಿರುವುದಿಲ್ಲ.
   (ಆ) ಗೃಹನಿರ್ಮಾಣ/ಖರೀದಿ/ನವೀಕರಣ ಮುಂತಾದ ಉದ್ದೇಶಗಳಿಗೆ ಕೊಟ್ಟ ಸಾಲವು ರೂ. 1197.10 ಲಕ್ಷ ಇರುತ್ತದೆ.
4. ಷೇರು, ಡಿಬೆಂಚರ್‌ಗಳ ಮೇಲೆ ಸಾಲವನ್ನು ಕೊಟ್ಟಿರುವುದಿಲ್ಲ.
5. (ಅ) ಬ್ಯಾಂಕಿನ ನಿರ್ದೇಶಕ ಮಂಡಲಿಯ ಸದಸ್ಯರಿಗೆ ಮತ್ತು ಅವರ ಹತ್ತಿರದ ಸಂಬಂಧಿಗಳಿಗೆ ಠೇವಣಿಗಳ ಆಧಾರದ ಮೇಲೆ ನೀಡಿರುವ ಸಾಲದ ಒಟ್ಟು ಮೊತ್ತವು ದಿನಾಂಕ 31-03-2016 ರಂದು ರೂ.204.40 ಲಕ್ಷ ಇರುತ್ತದೆ.
   (ಆ) ಈ ಸಾಲಿನಲ್ಲಿ ನಿರ್ದೇಶಕರಿಗೆ ಮತ್ತು ಅವರ ಸಂಬಂಧಿಕರಿಗೆ ಯಾವುದೇ ಆಧಾರ ರಹಿತ ಬ್ಯಾಂಕ್ ಗ್ಯಾರಂಟಿ ಮತ್ತು ಖಾತರಿ ಪತ್ರಗಳನ್ನು ಕೊಟ್ಟಿರುವುದಿಲ್ಲ.
6. 2015-16ನೇ ಸಾಲಿಗೆ ಬ್ಯಾಂಕಿನ ಠೇವಣಿಗಳ ಮೇಲೆ ಬಡ್ಡಿಯ ವೆಚ್ಚವು ಶೇಕಡಾ 7.53ರಷ್ಟು ಇದೆ.
7. ಬ್ಯಾಂಕಿನ ಪ್ರಸಕ್ತ ಸಾಲಿನ ಅನುತ್ಪಾದಕ ಆಸ್ತಿಗಳು ಕೆಳಕಂಡಂತೆ ಇರುತ್ತದೆ.

(ರೂ. ಲಕ್ಷಗಳಲ್ಲಿ)

| ದಿನಾಂಕ | ಒಟ್ಟು ಅನುತ್ಪಾದಕ ಆಸ್ತಿಗಳು | | ನಿವ್ವಳ ಅನುತ್ಪಾದಕ ಆಸ್ತಿಗಳು | |
|---|---|---|---|---|
| | ಮೊಬಲಗು | ಶೇಕಡವಾರು | ಮೊಬಲಗು | ಶೇಕಡವಾರು |
| 31-03-2016 | 453.39 | 3.27 % | -995.38 | 0.00 % |
| 31-03-2015 | 559.70 | 4.01 % | -808.70 | 0.00 % |
| ವ್ಯತ್ಯಾಸ | -106.31 | -0.74 % | -186.68 | 0.00 % |

8. 2015-16ನೇ ಸಾಲಿನಲ್ಲಿ ಬ್ಯಾಂಕಿನ ಲಾಭಗಳಿಕೆ ಈ ಕೆಳಕಂಡಂತಿದೆ.
   - ಬ್ಯಾಂಕಿನ ಬಡ್ಡಿಯ ಆದಾಯವು ದುಡಿಯುವ ಬಂಡವಾಳದ ಮೇಲೆ ಶೇಕಡಾ 6.08 ಇರುತ್ತದೆ.
   - ಇತರೆ ಆದಾಯವು ದುಡಿಯುವ ಬಂಡವಾಳದ ಮೇಲೆ ಶೇಕಡಾ 3.46 ಇರುತ್ತದೆ.
   - ಬ್ಯಾಂಕಿನ ಒಟ್ಟು ಗಳಿಕೆಯು ದುಡಿಯುವ ಬಂಡವಾಳದ ಮೇಲೆ ಶೇಕಡಾ 9.55 ಇರುತ್ತದೆ.
   - ಬ್ಯಾಂಕಿನ ಆಸ್ತಿಗಳ ಮೇಲೆ ಬಂದ ಗಳಿಕೆಯ ಪ್ರಮಾಣವು ಶೇಕಡಾ 10.08 ಇರುತ್ತದೆ.
   - ಬ್ಯಾಂಕಿನ ವ್ಯವಹಾರವು ಪ್ರತಿ ಸಿಬ್ಬಂದಿಗೆ ರೂ.559.25 ಲಕ್ಷ ಇರುತ್ತದೆ.
   - ನಿವ್ವಳ ಲಾಭವು ಪ್ರತಿ ಸಿಬ್ಬಂದಿಗೆ ಹೋಲಿಸಿದಲ್ಲಿ ರೂ.3.80 ಲಕ್ಷ ಇದೆ.
9. ಠೇವಣಿಗಳ ಮೇಲೆ ವಿಮೆಯ ಪ್ರೀಮಿಯಮ್‌ನ್ನು ದಿನಾಂಕ 19-05-2015 ಮತ್ತು 19-11-2015 ರಂದು ಒಟ್ಟು ರೂ.23.94 ಲಕ್ಷ, ಡಿಪಾಜಿಟ್ ಇನ್ಶೂರೆನ್ಸ್ ಅಂಡ್ ಕ್ರೆಡಿಟ್ ಗ್ಯಾರಂಟಿ ಕಾರ್ಪೋರೇಷನ್‌ಗೆ ಮುಂಗಡವಾಗಿ ಜಮಾ ಮಾಡಿದೆ ಮತ್ತು ಅವರಿಗೆ ಕೊಡಬೇಕಾದ ಪ್ರೀಮಿಯಂ ಬಾಕಿ ಇರುವುದಿಲ್ಲ.
10. ಬ್ಯಾಂಕು ಸಾಲಾಂತ್ಯಕ್ಕೆ ಠೇವಣಾತಿ ಮತ್ತು ಭದ್ರತೆಗಳ ಆಧಾರದ ಮೇಲೆ ರೂ.112.34 ಲಕ್ಷಗಳಿಗೆ ಬ್ಯಾಂಕ್ ಖಾತರಿ (Bank Guarantee) ಯನ್ನು ಕೊಟ್ಟಿರುತ್ತದೆ.
11. ಎನ್.ಪಿ.ಎ.:- ಪ್ರಸಕ್ತ ಸಾಲಿನ ಅಂತ್ಯಕ್ಕೆ ಇರುವಂತಹ ಈ ಕೆಳಕಂಡ ನಿಧಿಗಳ ಮೊಬಲಗನ್ನು ಹಿಂದಿನ ಸಾಲಿನಲ್ಲಿದ್ದ ನಿಧಿಗಳ ಮೊಬಲಗುಗಳೊಂದಿಗೆ ತುಲನೆ ಮಾಡಿದ ಹೋಲಿಕೆಯ ವಿವರಗಳು ಈ ಕೆಳಕಂಡಂತಿರುತ್ತದೆ.

(ರೂ. ಲಕ್ಷಗಳಲ್ಲಿ)

| ದಿನಾಂಕ | ಕರಡು ಮತ್ತು ಸಂಶಯಾತ್ಮಕ ಸಾಲಗಳ ನಿಧಿ | ಉತ್ಪಾದನಾ ಆಸ್ತಿಯ ಮೇಲೆ ಘಟನಾಪೇಕ್ಷ ಬಾಧ್ಯತೆ ನಿಧಿ | ಗುಂತಾಯಗಳ ಸವಕಳಿ ನಿಧಿ |
|---|---|---|---|
| 31-03-2016 | 1448.77 | 60.00 | 325.00 |
| 31-03-2015 | 1368.40 | 60.00 | 325.00 |
| ವ್ಯತ್ಯಾಸ | 80.37 | - | - |

12. ಡೆಫ್ ಖಾತೆಗೆ ವರ್ಗಾವಣೆಯಾಗಿರುವ ಮೊತ್ತ ರೂ. 62.41 ಲಕ್ಷ.

| | | | | | |
|---|---|---|---|---|---|
| ಉಮೇಶ್ ಎಸ್. ರೋಣದ್<br>ಪ್ರಧಾನ ವ್ಯವಸ್ಥಾಪಕರು | ಪಲ್ಲಾಗಟ್ಟೆ ಶಿವಾನಂದಪ್ಪ<br>ನಿರ್ದೇಶಕರು | ದೇವರಮನಿ ಶಿವಕುಮಾರ್<br>ನಿರ್ದೇಶಕರು | ಮುಂಡಾಸ್ ವೀರೇಂದ್ರ,<br>ಚಾರ್ಟರ್ಡ್ ಅಕೌಂಟೆಂಟ್, ನಿರ್ದೇಶಕರು | ಕೋಗುಂಡಿ ಬಕ್ಕೇಶಪ್ಪ<br>ಉಪಾಧ್ಯಕ್ಷರು | ಬಿ.ಸಿ. ಉಮಾಪತಿ<br>ಅಧ್ಯಕ್ಷರು |

## ಲೆಕ್ಕ ಪರಿಶೋಧಕರ ಪ್ರಮಾಣ ಪತ್ರ

ನಾನು ದಿ ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ದಾವಣಗೆರೆ ಇದರ ಕೇಂದ್ರ ಕಛೇರಿ ಮತ್ತು ಆರು ಶಾಖೆಗಳ (ಕ್ರೋಢೀಕೃತ) 2015-16ನೇ ಸಾಲಿನ ಲೆಕ್ಕ ಪರಿಶೋಧನೆಯನ್ನು ಮಾಡಿರುತ್ತೇನೆ. ಇದಕ್ಕೆ ಹಾಗೂ ಸಂಬಂಧಪಟ್ಟ ಆಸ್ತಿ ಪುಸ್ತಕಗಳು ಒದಗಿಸಿದ ವಿವರಗಳು ಹಾಗೂ ಸ್ಪಷ್ಟೀಕರಣಗಳ ಮೇರೆಗೆ ನನ್ನ ತಿಳುವಳಿಕೆ ನಂಬಿಕೆ ಮೇರೆಗೆ ಇದರ ಜೊತೆಗೆ ಲಗತ್ತಿಸಿರುವ ಲೆಕ್ಕಪತ್ರದ ಜವಾಬ್ದಾರಿ ತಃಖ್ತೆ ಮತ್ತು ಲಾಭ ನಷ್ಟ ತಃಖ್ತೆಯು ದಿನಾಂಕ: 31-03-2016ಕ್ಕೆ ಇದ್ದಂತೆ ನನ್ನ ವರದಿಯಲ್ಲಿನ ಷರಾಗಳಿಗೆ ಒಳಪಟ್ಟು ಬ್ಯಾಂಕಿನ ನೈಜ ಆರ್ಥಿಕ ಸ್ಥಿತಿಗತಿಯನ್ನು ಪ್ರತಿಬಿಂಬಿಸುತ್ತದೆಂದು ದೃಢೀಕರಿಸುತ್ತೇನೆ.

ಸಹಿ/-
ಎನ್. ಚನ್ನಬಸವಣ್ಣ
ಚಾರ್ಟರ್ಡ್ ಅಕೌಂಟೆಂಟ್
ಎಂ.ನಂ. 213853
ಮಾಲೀಕರು
ಮೆ॥ ಚನ್ನಬಸವಣ್ಣ ಅಂಡ್ ಕೋ. ದಾವಣಗೆರೆ.
ಎಫ್ ಆರ್.ನಂ. 010580S

ದಿನಾಂಕ : 06-08-2016
ಸ್ಥಳ : ದಾವಣಗೆರೆ

## ಉಪವಿಧಿಗಳ ತಿದ್ದುಪಡಿ

| ಉಪ ವಿಧಿ | ಹಾಲಿ ಇರುವ ಉಪವಿಧಿ | ಉಪ ವಿಧಿ | ಸೂಚಿಸಿರುವ ತಿದ್ದುಪಡಿ | ತಿದ್ದುಪಡಿಗೆ ಕಾರಣ |
|---|---|---|---|---|
| 3 | **ಬ್ಯಾಂಕಿನ ಕಾರ್ಯಕ್ಷೇತ್ರದ ವ್ಯಾಪ್ತಿ :**<br>ಬ್ಯಾಂಕಿನ ಕಾರ್ಯಕ್ಷೇತ್ರದ ವ್ಯಾಪ್ತಿಯು ದಾವಣಗೆರೆ ಜಿಲ್ಲಾ ಪ್ರದೇಶಕ್ಕೆ ಸೀಮಿತವಾಗಿರತಕ್ಕದ್ದು. ಈ ಬಗ್ಗೆ ಯಾವುದೇ ಬದಲಾವಣೆಯಾಗ ಬೇಕಾದಲ್ಲಿ, ಭಾರತೀಯ ರಿಸರ್ವ್ ಬ್ಯಾಂಕು ಆಗಿಂದಾಗ್ಗೆ ನೀಡುವ ಸೂಚನೆಗಳ ಅನ್ವಯ ರಿಸರ್ವ್ ಬ್ಯಾಂಕಿನ ಪೂರ್ವಭಾವಿ ಮಂಜೂರಾತಿಯು ಅವಶ್ಯಕ. | 3 | **ಬ್ಯಾಂಕಿನ ಕಾರ್ಯಕ್ಷೇತ್ರದ ವ್ಯಾಪ್ತಿ :**<br>ಬ್ಯಾಂಕಿನ ಕಾರ್ಯಕ್ಷೇತ್ರದ ವ್ಯಾಪ್ತಿಯು ದಾವಣಗೆರೆ ಹಾಗೂ ಹಾವೇರಿ ಜಿಲ್ಲಾ ಪ್ರದೇಶಕ್ಕೆ ಸೀಮಿತವಾಗಿರತಕ್ಕದ್ದು. ಈ ಬಗ್ಗೆ ಯಾವುದೇ ಬದಲಾವಣೆಯಾಗ ಬೇಕಾದಲ್ಲಿ, ಭಾರತೀಯ ರಿಸರ್ವ್ ಬ್ಯಾಂಕು ಆಗಿಂದಾಗ್ಗೆ ನೀಡುವ ಸೂಚನೆಗಳ ಅನ್ವಯ ರಿಸರ್ವ್ ಬ್ಯಾಂಕಿನ ಪೂರ್ವಭಾವಿ ಮಂಜೂರಾತಿಯು ಅವಶ್ಯಕ. | ಬ್ಯಾಂಕಿನ ಕಾರ್ಯಕ್ಷೇತ್ರ ವಿಸ್ತರಿಸಲು |
| 45 (1) | **ಮಂಡಲಿ ರಚನೆ :–**<br>ಬ್ಯಾಂಕಿನ ವ್ಯವಸ್ಥಾಪನೆಯ ಅಧಿಕಾರವು ಕಾಯ್ದೆ, ನಿಯಮ ಮತ್ತು ಉಪವಿಧಿಗಳಿಗೆ ಅನುಗುಣವಾಗಿ ರಚಿಸಲಾದ 13 ಜನ ನಿರ್ದೇಶಕರನ್ನೊಳಗೊಂಡ ಮಂಡಲಿಗೆ ಇರತಕ್ಕದ್ದು. ಇವುಗಳಲ್ಲಿ ಒಂದು ಸ್ಥಾನವನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳಿಗೆ ಸೇರಿದ ಸದಸ್ಯರಿಗೆ, ಎರಡು ಸ್ಥಾನಗಳನ್ನು ಮಹಿಳಾ ವರ್ಗದ ಸದಸ್ಯರಿಗೆ ಮತ್ತು ಒಂದು ಸ್ಥಾನವನ್ನು ಹಿಂದುಳಿದ ವರ್ಗಕ್ಕೆ ಸೇರಿದ ಸದಸ್ಯರಿಗೆ ಮೀಸಲಿರಿಸತಕ್ಕದ್ದು. | 45 (1) | **ಮಂಡಲಿ ರಚನೆ :–**<br>ಬ್ಯಾಂಕಿನ ವ್ಯವಸ್ಥಾಪನೆಯ ಅಧಿಕಾರವು ಕಾಯ್ದೆ, ನಿಯಮ ಮತ್ತು ಉಪವಿಧಿಗಳಿಗೆ ಅನುಗುಣವಾಗಿ ರಚಿಸಲಾದ **15** ಜನ ನಿರ್ದೇಶಕರನ್ನೊಳಗೊಂಡ ಮಂಡಲಿಗೆ ಇರತಕ್ಕದ್ದು. **ಇವುಗಳಲ್ಲಿ ಒಂದು ಸ್ಥಾನವನ್ನು ಪರಿಶಿಷ್ಟ ಜಾತಿಗೆ ಸೇರಿದ ಸದಸ್ಯರಿಗೆ, ಒಂದು ಸ್ಥಾನವನ್ನು ಪರಿಶಿಷ್ಟ ವರ್ಗಗಳಿಗೆ ಸೇರಿದ ಸದಸ್ಯರಿಗೆ, ಎರಡು ಸ್ಥಾನಗಳನ್ನು ಮಹಿಳಾ ವರ್ಗದ ಸದಸ್ಯರಿಗೆ ಮತ್ತು ಎರಡು ಸ್ಥಾನಗಳನ್ನು ಹಿಂದುಳಿದ ವರ್ಗಗಳಿಗೆ ಸೇರಿದ ಸದಸ್ಯರಿಗೆ ಮೀಸಲಿರಿಸತಕ್ಕದ್ದು.**<br>**ಹಿಂದುಳಿದ ವರ್ಗಗಳಿಗೆ ಮೀಸಲಾದ ಸ್ಥಾನಗಳನ್ನು ಈ ಕೆಳಕಂಡ ರೀತಿಯಲ್ಲಿ ಭರ್ತಿ ಮಾಡತಕ್ಕದ್ದು.**<br>(1) ಮೊದಲನೇಯ ಅವಧಿಗೆ ಎಲ್ಲಾ ಸ್ಥಾನಗಳನ್ನು ಹಿಂದುಳಿದ ವರ್ಗಪಂಗಡ "ಎ" ಗೆ ಸೇರಿದ ಸದಸ್ಯರಿಂದ ಭರ್ತಿ ಮಾಡಬೇಕು.<br>(2) ಎರಡನೇ ಮತ್ತು ಮೂರನೇ ಅವಧಿಗೆ ಎಲ್ಲಾ ಸ್ಥಾನಗಳನ್ನು ಹಿಂದುಳಿದ ವರ್ಗಗಳ ಪಂಗಡ "ಎ" ಮತ್ತು "ಬಿ" ಗೆ ಸೇರಿದ ಸದಸ್ಯರಿಂದ ಭರ್ತಿ ಮಾಡಬೇಕು.<br>(3) ನಾಲ್ಕನೇ ಅವಧಿಯ ಎಲ್ಲಾ ಸ್ಥಾನಗಳನ್ನು ಹಿಂದುಳಿದ ವರ್ಗ "ಎ" ಗೆ ಸೇರಿದ ಸದಸ್ಯರಿಂದ ಭರ್ತಿ ಮಾಡಬೇಕು. ನಿಬಂಧಕರಿಂದ ಹೊರಡಿಸಲಾದ ಸ್ಪಷ್ಟೀಕರಣಗಳು / ನಿರ್ದೇಶನಗಳು / ಸೂಚನೆಗಳು ಯಾವುದಾದರೂ ಇದ್ದಲ್ಲಿ ಅವುಗಳಿಗೆ ಒಳಪಟ್ಟು ಈ ಪದ್ಧತಿಯನ್ನು ಅನುಕ್ರಮವಾಗಿ ಮುಂದುವರೆಸತಕ್ಕದ್ದು. | ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ. 1959 ಕ್ಕೆ ಮಾಡಿರುವ ತಿದ್ದುಪಡಿಗಳ ಅನುಸಾರ |
| 48 (3) | **ಪದಾಧಿಕಾರಿಗಳ ಚುನಾವಣೆ :**<br>ಬ್ಯಾಂಕಿನ ಯಾರೇ ಪದಾಧಿಕಾರಿಯ ಸ್ಥಾನದಲ್ಲಿ ಯಾವುದೇ ಆಕಸ್ಮಿಕ ಖಾಲಿ ಸ್ಥಾನ ಉಂಟಾಗಿರುವ ಬಗ್ಗೆ ಅದಕ್ಕೆ ತಿಳಿವಳಿಕೆ ಕೊಟ್ಟ ದಿನಾಂಕದಿಂದ ಅರವತ್ತು ದಿನಗಳೊಳಗಾಗಿ, ಅಂಥ ಆಕಸ್ಮಿಕ ಖಾಲಿ ಸ್ಥಾನವನ್ನು ಭರ್ತಿ ಮಾಡಲು ಚುನಾವಣೆಯನ್ನು ನಡೆಸುವಂತೆ ಬ್ಯಾಂಕಿನ ಮಂಡಲಿಯು ಸಹಕಾರ ಚುನಾವಣಾ ಪ್ರಾಧಿಕಾರಕ್ಕೆ ತಿಳಿಸತಕ್ಕದ್ದು. | 48 (3) | **ಪದಾಧಿಕಾರಿಗಳ ಚುನಾವಣೆ :**<br>ಬ್ಯಾಂಕಿನ ಆಡಳಿತ ಮಂಡಲಿ ಪದಾಧಿಕಾರಿಗಳೊಬ್ಬರ ವಿರುದ್ಧ ಅವಿಶ್ವಾಸ ನಿರ್ಣಯ ಗೊತ್ತುವಳಿಯನ್ನು ಮಂಡಿಸಲು, ಸದರಿ ಪದಾಧಿಕಾರಿ ಅಧಿಕಾರ ಸ್ವೀಕರಿಸಿ ಎರಡು ವರ್ಷಗಳಾಗಿರಬೇಕು. ಹಾಗೂ ಬ್ಯಾಂಕಿನ ಆಡಳಿತ ಮಂಡಲಿಯ ಚುನಾಯಿತ ಸದಸ್ಯರಲ್ಲಿ ಮೂರನೇ ಒಂದರಷ್ಟು ಸದಸ್ಯರು ವಿನಂತಿ ಮಾಡದ ಹೊರತು ಅವಿಶ್ವಾಸ ನಿರ್ಣಯ ಗೊತ್ತುವಳಿಯನ್ನು ಮಂಡಿಸಲು ಬರುವುದಿಲ್ಲ. ಒಂದು ವೇಳೆ ಆ ಅವಿಶ್ವಾಸ ನಿರ್ಣಯಕ್ಕೆ ಸೋಲು ಉಂಟಾದಲ್ಲಿ ಇನ್ನೊಮ್ಮೆ ಸದರಿ ಪದಾಧಿಕಾರಿಯ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸಲು ಒಂದು ವರ್ಷಕಾಯಬೇಕಾಗುತ್ತದೆ. | |
| | | (4) | ಬ್ಯಾಂಕಿನ ಆಡಳಿತ ಮಂಡಲಿ ಪದಾಧಿಕಾರಿಗಳೊಬ್ಬರ ವಿರುದ್ಧ ಅವಿಶ್ವಾಸ ನಿರ್ಣಯ ಗೊತ್ತುವಳಿಯನ್ನು ಅದಕ್ಕಾಗಿಯೇ ಕರೆದ ವಿಶೇಷ ಸಭೆಯಲ್ಲಿ, ಬ್ಯಾಂಕಿನ ಚುನಾಯಿತ ನಿರ್ದೇಶಕರ, ಒಟ್ಟು ಸಂಖ್ಯೆಯ ಮೂರನೇ ಎರಡರಷ್ಟು ಸದಸ್ಯರು ಅನುಮೋದಿಸಿದಲ್ಲಿ, ಆ ಕ್ಷಣದಿಂದಲೇ ಸದರಿ ಸ್ಥಾನಖಾಲಿಯಾಗಿದೆ ಎಂದು ಪರಿಗಣಿಸಲಾಗುತ್ತದೆ. ಅವಿಶ್ವಾಸ ನಿರ್ಣಯ ಗೊತ್ತುವಳಿ ಮಂಡನೆಗೆ, ನಿಯಮಗಳಲ್ಲಿ ರೂಪಿಸಿರುವ ರೀತಿಯಲ್ಲೇ ವಿಧಾನಗಳನ್ನು ಅನುಸರಿಬೇಕಾಗುತ್ತದೆ. | ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ. 1959 ಕ್ಕೆ ಮಾಡಿರುವ ತಿದ್ದುಪಡಿಗಳ ಅನುಸಾರ |
| | | (5) | .ಬ್ಯಾಂಕಿನ ಯಾರೇ ಪದಾಧಿಕಾರಿಯ ಪದದಲ್ಲಿ ಯಾವುದೇ ಆಕಸ್ಮಿಕ ಖಾಲಿ ಸ್ಥಾನ ಉಂಟಾಗಿರುವ ಬಗ್ಗೆ ಅದಕ್ಕೆ ತಿಳಿವಳಿಕೆ ಕೊಟ್ಟ ದಿನಾಂಕದಿಂದ ಅರವತ್ತು ದಿನಗಳೊಳಗಾಗಿ, ಅಂಥ ಆಕಸ್ಮಿಕ ಖಾಲಿ ಸ್ಥಾನವನ್ನು ಭರ್ತಿ ಮಾಡಲು ಚುನಾವಣೆಯನ್ನು ನಡೆಸುವಂತ ಬ್ಯಾಂಕಿನ ಮಂಡಲಿಯು ಸಹಕಾರ ಚುನಾವಣಾ ಪ್ರಾಧಿಕಾರಕ್ಕೆ ತಿಳಿಸತಕ್ಕದ್ದು. | |

| ಉಪ ವಿಧಿ | ಹಾಲಿ ಇರುವ ಉಪವಿಧಿ | ಉಪ ವಿಧಿ | ಸೂಚಿಸಿರುವ ತಿದ್ದುಪಡಿ | ತಿದ್ದುಪಡಿಗೆ ಕಾರಣ |
|---|---|---|---|---|
| 63<br>5(4) | **ನೌಕರರ ಸೇವಾ ಷರತ್ತುಗಳು :–**<br>**ನಿವೃತ್ತಿಯ ಸಮಯದಲ್ಲಿ ರಜೆ ನಗದೀಕರಣ** : ಒಬ್ಬ ನೌಕರನಿಗೆ ಅವನ ನಿವೃತ್ತಿಗೆ ಮೊದಲು ಅವನ ಲೆಕ್ಕದಲ್ಲಿ ರಜೆ ಬಾಕಿಯಿದ್ದರೆ ಇನ್ನೂರ ನಲವತ್ತು ದಿನಗಳ ಗರಿಷ್ಠ ಮಿತಿಗೊಳಪಟ್ಟು ಪೂರ್ಣ ವೇತನದ ಮೇಲೆ ಗಳಿಕೆರಜೆಯನ್ನು ಮಂಜೂರು ಮಾಡಬಹುದು. ಸಂಸ್ಥೆಯ ಕೆಲಸಕಾರ್ಯಗಳ ಹಿತದೃಷ್ಟಿಯಿಂದ ಒಬ್ಬ ನೌಕರನ ಸೇವೆಯನ್ನು ಬಿಟ್ಟುಕೊಡಲಾಗದಿದ್ದರೆ, ಇನ್ನೂರ ನಲವತ್ತು ದಿನಗಳ ಗರಿಷ್ಠ ಮಿತಿಗೆ ಒಳಪಟ್ಟು ಆತನ ಹಕ್ಕಿನಲ್ಲಿರುವ ಗಳಿಕೆರಜೆಯನ್ನು ನಗದೀಕರಿಸಲು ಅನುಮತಿಸಿ ರಜೆ ವೇತನದ ಸಮನಾದ ಹಣವನ್ನು ಕೊಡತಕ್ಕದ್ದು. | 63<br>5(4) | **ನೌಕರರ ಸೇವಾ ಷರತ್ತುಗಳು :–**<br>**ನಿವೃತ್ತಿಯ ಸಮಯದಲ್ಲಿ ರಜೆ ನಗದೀಕರಣ :**<br>ಕರ್ನಾಟಕ ಸರ್ಕಾರಿ ಸೇವಾ ನಿಯಮಾವಳಿ ಪ್ರಕಾರ. | ಕರ್ನಾಟಕ ಸಹಕಾರ ಸಂಘಗಳ ತಿದ್ದುಪಡಿ ನಿಯಮಗಳ ನಿಯಮ 18ರನ್ವಯ ಹಾಲಿ ಇರುವ ನೌಕರರ ಸೇವಾ ಷರತ್ತುಗಳನ್ನು ಉಪ ವಿಧಿಯಲ್ಲಿ ಅಳವಡಿಸುವುದು. |
| 63.7<br>(i) | **ಹೊಸ ಸೇರ್ಪಡೆ :–** | 63.7<br>(i) | **ವೈದ್ಯಕೀಯ ಮರುಪೂರ್ಣ ವೆಚ್ಚ**<br>**ವೈದ್ಯಕೀಯ ವೆಚ್ಚಗಳು**<br>ಉದ್ಯೋಗಿಗಳ ವೈದ್ಯಕೀಯ ವೆಚ್ಚಗಳನ್ನು ಮರುಪೂರ್ಣ ಮಾಡಲು ಕರ್ನಾಟಕ ಸರ್ಕಾರ, ಸಹಕಾರ ಇಲಾಖೆ, ಯಶಸ್ವಿನಿ ನಗರ ಸಹಕಾರಿಗಳ ಆರೋಗ್ಯ ರಕ್ಷಣಾ ಯೋಜನೆ ಅಡಿಯಲ್ಲಿ ಬರುವ ಖಾಯಿಲೆಗಳಿಗೆ ಯಥಾರೀತಿ ಸಿಬ್ಬಂದಿಗಳಿಗೆ ವೈದ್ಯಕೀಯ ವೆಚ್ಚದಲ್ಲಿ ಶೇ.90 ಮತ್ತು ಅವನ/ಅವಳ ಕುಟುಂಬದ ಸದಸ್ಯರ ವೈದ್ಯಕೀಯ ವೆಚ್ಚದಲ್ಲಿ ಶೇ.60ನ್ನು ವೈದ್ಯಕೀಯ ಮರುಪೂರ್ಣ ವೆಚ್ಚವನ್ನು ಪಾವತಿಸುವುದು. | ಕರ್ನಾಟಕ ಸಹಕಾರ ಸಂಘಗಳ ತಿದ್ದುಪಡಿ ನಿಯಮಗಳ ನಿಯಮ 18ರನ್ವಯ ಹಾಲಿ ಇರುವ ನೌಕರರ ಸೇವಾ ಷರತ್ತುಗಳನ್ನು ಉಪ ವಿಧಿಯಲ್ಲಿ ಅಳವಡಿಸುವುದು. |
| 77. | **ಸಿಬ್ಬಂದಿ ವರ್ಗದವರಿಗೆ ಸಾಲ ಮತ್ತು ಮುಂಗಡಗಳು :**<br>ಯಾವುದೇ ಖಾಯಂ ಆದ ಮತ್ತು 3 ವರ್ಷಕ್ಕೂ ಹೆಚ್ಚು ಕಾಲ ಸೇವೆ ಸಲ್ಲಿಸಿದಂತಹ ಬ್ಯಾಂಕಿನ ನೌಕರರಿಗೆ ಮಂಡಲಿಯು ಬ್ಯಾಂಕಿನ ಸಿಬ್ಬಂದಿ ಸೇವಾ ನಿಯಮಗಳಲ್ಲಿರುವ ನಿಬಂಧನೆಗಳಿಗೊಳಪಟ್ಟು, ಸಾಲ ಮತ್ತು ಮುಂಗಡ ಮಂಜೂರು ಮಾಡಬಹುದು. | 77. | **ಸಿಬ್ಬಂದಿ ವರ್ಗದವರಿಗೆ ಸಾಲ ಮತ್ತು ಮುಂಗಡಗಳು :**<br>ಯಾವುದೇ ಖಾಯಂ ಆದ ಮತ್ತು 3 ವರ್ಷಕ್ಕೂ ಹೆಚ್ಚು ಕಾಲ ಸೇವೆ ಸಲ್ಲಿಸಿದಂತಹ ಬ್ಯಾಂಕಿನ ನೌಕರರಿಗೆ ಬ್ಯಾಂಕಿನ ಸಾಲ ಮತ್ತು ಮುಂಗಡಗಳ ನಿಯಮಾವಳಿಗೆ ಒಳಪಟ್ಟು ಆಡಳಿತ ಮಂಡಲಿಯು ಸಾಲ ಮತ್ತು ಮುಂಗಡ ಮಂಜೂರು ಮಾಡಬಹುದು. | ಕರ್ನಾಟಕ ಸಹಕಾರ ಸಂಘಗಳ ತಿದ್ದುಪಡಿ ನಿಯಮಗಳ ನಿಯಮ 18ರನ್ವಯ ಹಾಲಿ ಇರುವ ನೌಕರರ ಸೇವಾ ಷರತ್ತುಗಳನ್ನು ಉಪ ವಿಧಿಯಲ್ಲಿ ಅಳವಡಿಸುವುದು. |
| 104<br>(3) | **ನಿವ್ವಳ ಲಾಭ ವಿಭಜನಾ ಕ್ರಮ :**<br>ಜಾತಾ ಉಳಿದ ಲಾಭವನ್ನು ಈ ಕೆಳಕಂಡಂತೆ ವಿನಿಯೋಗಿಸಬುಹುದು:<br>(ಎ) ಶೇಕಡಾ 10ಕ್ಕೆ ಕಡಿಮೆ ಇಲ್ಲದಂತೆ ಮೊಬಲಗನ್ನು ಕರಡು ಸಾಲದ ನಿಧಿಗೆ (ಹೋಕುಬಾಕಿ ನಿಧಿಗೆ).<br>(ಬಿ) ಶೇಕಡಾ 15ಕ್ಕೆ ಕಡಿಮೆ ಇಲ್ಲದ ಮೊಬಲಗನ್ನು ಕಟ್ಟಡದ ನಿಧಿಗೆ. | 104<br>(3) | **ನಿವ್ವಳ ಲಾಭ ವಿಭಜನಾ ಕ್ರಮ :**<br>ಜಾತಾ ಉಳಿದ ಲಾಭವನ್ನು ಈ ಕೆಳಕಂಡಂತೆ ವಿನಿಯೋಗಿಸಬುಹುದು:<br>(ಎ) ಶೇಕಡಾ 10ಕ್ಕೆ ಮೀರದಂತೆ ಮೊಬಲಗನ್ನು ಕರಡು ಸಾಲದ ನಿಧಿಗೆ (ಹೋಕುಬಾಕಿ ನಿಧಿಗೆ).<br>(ಬಿ) ಶೇಕಡಾ 15ಕ್ಕೆ ಮೀರದಂತೆ ಮೊಬಲಗನ್ನು ಕಟ್ಟಡದ ನಿಧಿಗೆ. | ಲಾಭದಲ್ಲಿ ಬ್ಯಾಂಕಿನ ಇತರೆ ನಿಧಿಗಳಿಗೆ ಹೆಚ್ಚಿನ ಮೊತ್ತ ವಿನಿಯೋಗಿಸಲು. |

## ಆಡಳಿತಾಧಿಕಾರಿಗಳು



ಉಮೇಶ್ ಎಸ್.ರೋಣದ
ಪ್ರಧಾನ ವ್ಯವಸ್ಥಾಪಕರು



ಡಿ. ವಿ. ಆರಾಧ್ಯಮಠ
ಉಪಪ್ರಧಾನ ವ್ಯವಸ್ಥಾಪಕರು



ಡಿ. ಇ. ಶಿವಶಂಕರ್
ವ್ಯವಸ್ಥಾಪಕರು
ಪಿ.ಜೆ. ಬಡಾವಣೆ ಶಾಖೆ.



ಎಲ್. ಎಸ್. ಗೀತ
ವ್ಯವಸ್ಥಾಪಕರು
ಪ್ರಧಾನ ಕಛೇರಿ.



ಹೆಚ್. ಬಸಪ್ಪ
ವ್ಯವಸ್ಥಾಪಕರು
ಚೌಕಿಪೇಟೆ ಶಾಖೆ.



ಬಿ. ನಾಗಭೂಷಣ್
ವ್ಯವಸ್ಥಾಪಕರು
ಆಡಳಿತ ಕಛೇರಿ.



ಎಂ.ಎಂ. ಜಯಶೀಲ
ವ್ಯವಸ್ಥಾಪಕರು
ದೇವರಾಜ ಅರಸ್ ಬಡಾವಣೆ ಶಾಖೆ



ಕೆ.ಬಿ ಸಾನಂದ ಗಣೇಶ್
ಪ್ರಭಾರ ವ್ಯವಸ್ಥಾಪಕರು
ನರಸರಾಜ ರಸ್ತೆ ಶಾಖೆ



ಎಸ್. ಗಣೇಶಪ್ಪ
ಪ್ರಭಾರ ವ್ಯವಸ್ಥಾಪಕರು
ಹೊನ್ನಾಳಿ ಶಾಖೆ.



ಆರ್. ಎ. ಪ್ರಸನ್ನ
ವ್ಯವಸ್ಥಾಪಕರು
ಸಾಲ ವಿಭಾಗ, ಆಡಳಿತ ಕಛೇರಿ.



ಬಿ.ಎಸ್. ಮಲ್ಲೇಶ್
ವ್ಯವಸ್ಥಾಪಕರು
ತೊಡಗಣೆ ವಿಭಾಗ, ಆಡಳಿತ ಕಛೇರಿ.

---

## ಸದಸ್ಯರ ಗಮನಕ್ಕೆ

1. **ಬ್ಯಾಂಕಿನ ಮಾನ್ಯ ಸದಸ್ಯರು ತಮ್ಮ ಷೇರು ಖಾತೆಯಲ್ಲಿ ಕನಿಷ್ಠ ಷೇರು ಮೊತ್ತ ರೂ. 1000/– ಹೊಂದಿರುವುದು ಕಡ್ಡಾಯವಾಗಿರುತ್ತದೆ, ಐದು ವಾರ್ಷಿಕ ಸಾಮಾನ್ಯ ಸಭೆಗಳ ಪೈಕಿ ಮೂರು ಸಭೆಗಳಿಗೆ ಹಾಜರಾಗದಿದ್ದಲ್ಲಿ ಅಥವಾ ಮೂರು ನಿರಂತರ ಸಹಕಾರ ವರ್ಷಗಳವರೆಗೆ ಈ ಉಪವಿಧಿಗಳಲ್ಲಿ ನಿರ್ದಿಷ್ಟ ಪಡಿಸಿದಂತೆ ಬ್ಯಾಂಕು ದೊರಕಿಸಿಕೊಡುವ ಕನಿಷ್ಠ ಸೇವೆಗಳನ್ನು ಅಥವಾ ಸೌಲಭ್ಯಗಳನ್ನು ಪ್ರತಿ ವರ್ಷ ಬಳಸಿಕೊಳ್ಳಲು ತಪ್ಪಿದಲ್ಲಿ, ಅಂತಹ ಸದಸ್ಯರು ಸಾಮಾನ್ಯ ಸಭೆಯಲ್ಲಿ ಹಾಗೂ ನಿರ್ದೇಶಕರ ಚುನಾವಣೆಯಲ್ಲಿ ಮತ ನೀಡುವ ಮತ್ತು ಸ್ಪರ್ಧಿಸುವ ಹಕ್ಕನ್ನು ಕಳೆದು ಕೊಳ್ಳುವರು. ಆದುದರಿಂದ ಎಲ್ಲಾ ಸದಸ್ಯರು ತಪ್ಪದೇ ಮಹಾಸಭೆಗೆ ಹಾಜರಾಗಲು ಕೋರಿದೆ.**
2. ಪ್ರತಿಯೊಬ್ಬ ಜಾಮೀನುದಾರರು ಸಾಲಗಾರರಷ್ಟೇ ತಾವು ಜಾಮೀನಾದ ಬ್ಯಾಂಕಿನ ಮೊತ್ತಕ್ಕೆ ಜವಾಬ್ದಾರರಾಗಿರುತ್ತಾರೆ. ಸದಸ್ಯರು ಜಾಮೀನು ಆಗುವ ಪೂರ್ವದಲ್ಲಿ ಸಾಲಗಾರರ ಸಾಂಪತ್ತಿಕ ಸ್ಥಿತಿ, ಸಾಲದ ಉದ್ದೇಶ ಕಂತುಗಳನ್ನು ಪಾವತಿಸುವ ಶಕ್ತಿ, ಇವುಗಳ ಬಗ್ಗೆ ತಿಳಿದುಕೊಳ್ಳಲು ಹಾಗೂ ನಿಗದಿಯಾದ ಕಾಲಕ್ಕೆ ಸಾಲಗಾರನು ಕಂತುಗಳನ್ನು ಸರಿಯಾಗಿ ಕಟ್ಟುವಂತೆ ಮಾಡಿ ಸಹಕರಿಸಲು ಕೋರಿದೆ.
3. ಡಿವಿಡೆಂಡ್ ಪಡೆಯಲು ವಿನಂತಿ : ಮಾನ್ಯ ಸದಸ್ಯರು 2012–13ನೇ ಸಾಲಿನ ಡಿವಿಡೆಂಡನ್ನು ಈವರೆಗೂ ಪಡೆಯದೇ ಇದ್ದಲ್ಲಿ. ದಿನಾಂಕ: 31–12–2016 ರೊಳಗಾಗಿ ಪಡೆಯಲು ಸೂಚಿಸಿದೆ. ತಪ್ಪಿದಲ್ಲಿ 2012–13ನೇ ಸಾಲಿನ ಡಿವಿಡೆಂಡನ್ನು ಬ್ಯಾಂಕಿನ ಉಪವಿಧಿ ನಂ.106ರ ಮೇರೆಗೆ ಮೀಸಲು ನಿಧಿಗೆ ವರ್ಗಾಯಿಸಲಾಗುವುದು.
4. ಗುರುತಿನ ಕಾರ್ಡ್ ಪಡೆಯಲು ವಿನಂತಿ : ಸಹಕಾರಿ ಕಾಯ್ದೆ ಪ್ರಕಾರ ಬ್ಯಾಂಕಿನ ವಾರ್ಷಿಕ ಮಹಾಸಭೆಯಲ್ಲಿ ಮಾನ್ಯ ಸದಸ್ಯರು "ಗುರುತಿನ ಚೀಟಿ" (Identity Card) ಹಾಜರುಪಡಿಸುವುದು ಕಡ್ಡಾಯವಾಗಿರುತ್ತದೆ. ಇಲ್ಲದಿದ್ದಲ್ಲಿ ವಾರ್ಷಿಕ ಮಹಾಸಭೆಯಲ್ಲಿ ಭಾಗವಹಿಸಲು ಅವಕಾಶವಿರುವುದಿಲ್ಲ. ಆದ್ದರಿಂದ ಬ್ಯಾಂಕಿನ ಮುಖ್ಯ ಕಛೇರಿಯಲ್ಲಿ ಸದಸ್ಯರುಗಳ "ಗುರುತಿನ ಕಾರ್ಡ್" ಉಚಿತವಾಗಿ ಕೊಡುವ ವ್ಯವಸ್ಥೆ ಮಾಡಲಾಗಿದೆ. ಮಾನ್ಯ ಸದಸ್ಯರು ಕೂಡಲೇ ಬ್ಯಾಂಕಿನ ಕೆಲಸದ ವೇಳೆಯಲ್ಲಿ (ಬೆಳಿಗ್ಗೆ 10–30 ರಿಂದ ಸಂಜೆ 5–00 ರವರೆಗೆ) ಬಂದು ಗುರುತಿನ ಕಾರ್ಡ್ ಪಡೆಯಲು ಕೋರಿದೆ.

## ಗ್ರಾಹಕರಿಗೆ ಈ ಕೆಳಕಂಡ ಸೌಲಭ್ಯಗಳನ್ನು ಒದಗಿಸಲಾಗಿದೆ

* ಬ್ಯಾಂಕಿನ ಮುಖ್ಯ ಕಛೇರಿ ಹಾಗೂ ಶಾಖೆಗಳಲ್ಲಿ ಆರ್.ಟಿ.ಜಿ.ಎಸ್. (RTGS) / ಎನ್.ಇ.ಎಫ್.ಟಿ (NEFT) ಸೌಲಭ್ಯ ಕಲ್ಪಿಸಲಾಗಿದೆ.
* ಸಿ.ಡಿ.ಎಂ. (ನಗದು ಸ್ವೀಕರಿಸುವ ಯಂತ್ರ) : ನಮ್ಮ ಬ್ಯಾಂಕಿನ ಗ್ರಾಹಕರಿಗೆ ಇನ್ನೂ ಹೆಚ್ಚಿನ ಸೌಲಭ್ಯ ಒದಗಿಸುವ ದೃಷ್ಟಿಯಿಂದ ನಗದು ಸ್ವೀಕರಿಸುವ ಯಂತ್ರ 4 ಶಾಖೆಗಳಲ್ಲಿ ಅಳವಡಿಸಿಕೊಳ್ಳಲಾಗಿದೆ. ಇದರಿಂದ ಗ್ರಾಹಕರಿಗೆ ಶೀಘ್ರ ಸೇವೆ ದೊರಕುತ್ತಿದೆ.
* ನಿಮ್ಮ ವ್ಯವಹಾರದ ಅಭಿವೃದ್ಧಿಗೆ, ಗೃಹನಿರ್ಮಾಣ, ವಾಹನ ಸಾಲ, ಆಭರಣ ಸಾಲ, ಇನ್ನೂ ಅನೇಕ ರೀತಿಯ ಸಾಲ ಸೌಲಭ್ಯಗಳು ದೊರೆಯುತ್ತವೆ.
* ನಿಮ್ಮ ಠೇವಣಾತಿಗಳ ಮೇಲೆ ಆಕರ್ಷಕ ಬಡ್ಡಿದರ, ಹಿರಿಯ ನಾಗರೀಕರಿಗೆ 0.50% ಹೆಚ್ಚಿನ ಬಡ್ಡಿದರ.
* ಇತ್ತೀಚೆಗೆ ಕೇಂದ್ರ ಸರ್ಕಾರ ಮಂಡಿಸಿದ ಆರ್ಥಿಕ ಮುಂಗಡ ಪತ್ರದ ಪ್ರಕಾರ ಬ್ಯಾಂಕಿನ ಸದಸ್ಯರ ಠೇವಣಿಗಳ ಮೇಲೆ ವಾರ್ಷಿಕ ರೂ. 10 ಸಾವಿರಕ್ಕೂ ಹೆಚ್ಚು ಬಡ್ಡಿ ನೀಡಿದಲ್ಲಿ ಆದಾಯದ ಮೂಲದಲ್ಲಿಯೇ ಆದಾಯಕರ (T.D.S.) ಕಡಿತ ಮಾಡಬೇಕಾಗುತ್ತದೆ. ಆದಾಯ ತೆರಿಗೆ ಮಿತಿಗಿಂತ ಕಡಿಮೆ ಇದ್ದಲ್ಲಿ ನಮೂನೆ 15G ಅಥವಾ ಹಿರಿಯ ನಾಗರೀಕರಾಗಿದ್ದಲ್ಲಿ ನಮೂನೆ 15H ನ್ನು ದ್ವಿ ಪ್ರತಿಯಲ್ಲಿ ಸಂಬಂಧಪಟ್ಟ ಶಾಖೆಯಲ್ಲಿ ಪ್ರತಿ ವರ್ಷವೂ ಮುಂಗಡವಾಗಿ ನೀಡಿದಲ್ಲಿ ಆದಾಯಕರ ಕಡಿತಗೊಳಿಸಲಾಗುವುದಿಲ್ಲ.
* ಕರ್ನಾಟಕ ರಾಜ್ಯದ "ಯಶಸ್ವಿನಿ ನಗರ ಸಹಕಾರಿ ಆರೋಗ್ಯ ರಕ್ಷಣಾ ಯೋಜನೆ" ನಮ್ಮ ಬ್ಯಾಂಕಿನ ಸದಸ್ಯರಿಗೂ ಲಭ್ಯವಿದ್ದು ಮಾನ್ಯ ಸದಸ್ಯರು ಇದರ ಸದುಪಯೋಗವನ್ನು ಪಡೆಯಬಹುದಾಗಿದೆ.

Book-post

To,

## THE DAVANGERE URBAN CO-OPERATIVE BANK LTD.,


Head Office : P.B. No. 217, P.B. Road, Davangere - 577 002.

| | | | |
|---|---|---|---|
| ಮುಖ್ಯ ಕಛೇರಿ (ಪ್ರಧಾನ ವ್ಯವಸ್ಥಾಪಕರು) | : 231155 | ಚೌಕಿಪೇಟೆ ಶಾಖೆ | : 272543 |
| ಮುಖ್ಯ ಕಛೇರಿ (ಸಾಲಗಳು) | : 272540 | ನರಸರಾಜ ರಸ್ತೆ ಶಾಖೆ | : 272544 / 49 |
| ಮುಖ್ಯ ಕಛೇರಿ (ಬ್ಯಾಂಕಿಂಗ್) | : 272541 | ಪಿ.ಜೆ. ಬಡಾವಣೆ ಶಾಖೆ | : 272546 |
| ಮುಖ್ಯ ಕಛೇರಿ (ವ್ಯವಸ್ಥಾಪಕರು) | : 272545 | ದೇವರಾಜ್‌ಅರಸ್ ಬಡಾವಣೆ ಶಾಖೆ | : 272547 |
| ಫ್ಯಾಕ್ಸ್ (08192) | : 230929 | ಹೊನ್ನಾಳಿ ಶಾಖೆ (08188) | : 251905 |

web : www.ducbank.com email : ducbank@yahoo.com


Eskay DVG. Ph : 254042